ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ





ಗದಗದಲ್ಲಿ ನಡೆದ "ಸ್ವರಾಜ್ – ಸ್ವ ಆಡಳಿತದ ಸ್ಥಳೀಯ ಮಾದರಿಗಳು" ವಿಚಾರ ಸಂಕಿರಣದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಕಾರ್ಯಕಾರಿಣಿ ಸದಸ್ಯ ಸುರೇಶ್ ಭಯ್ಯಾಜಿ ಜೋಶಿ ಮಾತನಾಡುತ್ತಿರುವುದು.


ಸಂಪುಟ : 44 | ಸಂಚಿಕೆ : 23 | ಫಾಲ್ಗುಣ–ಚೈತ್ರ | ಕಲಿಯುಗಾಬ್ದ 5124 | 15–03–2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಹಿಂದೂ ಸಮಾಜವನ್ನು ಏಕತೆಯ ಸೂತ್ರದಲ್ಲಿ ಬೆಸೆದ ಡಾ. ಕೇಶವ ಬಲಿರಾಂ ಹೆಡಗೇವಾರ್

ಆ ಹುಡುಗನ ಮೇಲೆ ಶಿವಾಜಿ ಮಹಾರಾಜರ ಸ್ವರಾಜ್ಯ ಸ್ಥಾಪನೆಯ ಉದ್ದೇಶ ಮನಸ್ಸಿನಾಳದಲ್ಲಿ ಅಚ್ಚಳಿಯದ ಪ್ರಭಾವವೊತ್ತಿತ್ತು! ನಾಗಪುರದ ಸೀತಾಬರ್ಡಿಕೋಟೆಯ ಮೇಲೆ ಆತ ಬ್ರಿಟೀಷರ ಯೂನಿಯನ್ ಜಾಕ್ ಹಾರಾಡುವುದನ್ನು ಕಂಡ. ಆ ಧ್ವಜ ಆತನೊಳಗಿನ ದೇಶಭಕ್ತಿಗೆ ಅಪಮಾನದ ಸಂಕೇತವಾಗಿತ್ತು. ಅತನೊಳಗೆ ಒಂದು ವಿಚಾರ ಮೊಳಕೆಯೊಡೆದಿತ್ತು. ಬ್ರಿಟಿಷರ ಈ ಧ್ವಜವನ್ನು ಕಿತ್ತೆಸೆದು ಅಲ್ಲಿ ನಮ್ಮ ಭಗವಾಧ್ವಜವನ್ನು ಪ್ರತಿಷ್ಠಾಪಿಸಿದರೆ ಆ ಕೋಟೆಯನ್ನು ನಾವು ಗೆದ್ದಂತೆ ಎಂದು ಭಾವಿಸಿದ. ಆದರೆ ಅಲ್ಲಿ ಗಟ್ಟಿ ಪಹರೆ ಇತ್ತು, ಧ್ವಜ ಹಾರಿಸುವಂತಿಲ್ಲ. ಆದರೆ ಸ್ವರಾಜ್ಯ ಕಟ್ಟುವುದೆಂದರೆ ಸುಮ್ಮನೆಯೇ? ತಕ್ಷಣ ಸ್ನೇಹಿತರೊಂದಿಗೆ ಕಾರ್ಯಪ್ರವೃತ್ತನಾದ. ಅವರ ಗುರುಗಳಾದ ವಝೆ ಮಾಸ್ತರರು ಅವರಿಗಾಗಿ ಓದಲು ಕೋಣೆಯೊಂದನ್ನು ಬಿಟ್ಟುಕೊಟ್ಟಿದ್ದರು. ಅದೇ ಅವರ ಕಾರ್ಯಾಚರಣೆಯ ಕೇಂದ್ರವಾಯಿತು. ಆ ಕೊಠಡಿಯೊಳಗಿನಿಂದ ಕೋಟೆಯವರೆಗೆ ಸುರಂಗ ತೋಡುವುದೆಂದು ನಿಶ್ಚಯಮಾಡಿ ಸನಿಕೆ, ಗುದ್ದಲಿ ತಂದು ಅಗೆಯುವ ಕೆಲಸ ಶುರು ಮಾಡಿಯೇ ಬಿಟ್ಟಿದ್ದರು. ಮೂರು ದಿನಗಳಿಂದ ಕೋಣೆಯ ಬಾಗಿಲು ಮುಚ್ಚಿದ್ದನ್ನು ಕಂಡು ಮಾಸ್ತರರು ಬಾಗಿಲು ತೆರೆದು ನೋಡಿದಾಗ ಕಂಡದ್ದು ಒಂದು ದೊಡ್ಡ ಗುಂಡಿ ಸುತ್ತಲೂ ಮಣ್ಣಿನ ರಾಶಿ ಮತ್ತು ನೆಲವನ್ನು ಅಗೆಯುತ್ತಿದ್ದ ಆ ಹುಡುಗರು. ಆ ಹುಡುಗ ಸುರಂಗ ತೋಡುವ ತಮ್ಮ ಉದ್ದೇಶವನ್ನು ಹೇಳಿಯೇ ಬಿಟ್ಟ. ವಝೇ ಮಾಸ್ತರರಿಗೆ ಇಂಥ ಕಾರ್ಯಸಾಧುವಲ್ಲದ ಕೆಲಸಕ್ಕೆ ಕೈ ಹಾಕಿ ಸಮಯ ವ್ಯರ್ಥ ಮಾಡುವುದು ಸರಿಯಲ್ಲ ಎಂದು ಗದರಿಸಿ ಹೇಳಿದರಾದರೂ ಅವನೊಳಗಿನ ದೇಶಭಕ್ತಿಯನ್ನು ಮೆಚ್ಚದಿರಲು ಅವರಿಂದ ಸಾಧ್ಯವಾಗಲಿಲ್ಲ. ಇಂಥ ಅಸಾಧ್ಯ ಕೆಲಸವನ್ನು ಸಾಧ್ಯ ಮಾಡಲು ಹೊರಟ ಅಸಾಧ್ಯ ಸಾಧಕನೇ ಮುಂದೆ ಡಾಕ್ಟರ್ ಪದವಿಯನ್ನು ಪಡೆದು ಅನೈಕ್ಯತೆಯ ರೋಗದಿಂದ ಬಳಲುತ್ತಿದ್ದ ಹಿಂದೂ ಸಮಾಜಕ್ಕೆ ಐಕ್ಯತೆಯ ಸೂತ್ರ ಬೆಸೆದು ಹಿಂದುಗಳನ್ನು ಸಂಘಟಿಸಿದ ಡಾ. ಕೇಶವ ಬಲಿರಾಂ ಹೆಡಗೇವಾರ್. ಅವರು ಸ್ಥಾಪಿಸಿದ ಸಂಘಟನೆಯೇ ರಾಷ್ಟ್ರೀಯ ಸ್ವಯಂಸೇವಕ ಸಂಘ [RSS].

ಡಾ. ಕೇಶವ ಬಲಿರಾಂ ಹೆಡಗೇವಾರ್ ಹುಟ್ಟಿದ್ದು 1869ರ ಏಪ್ರಿಲ್ 1ರ ಯುಗಾದಿಯಂದು ಮಹಾರಾಷ್ಟ್ರದ ನಾಗಪುರದಲ್ಲಿ. ಸಂಘ ಸ್ಥಾಪಕ ಡಾ. ಕೇಶವ ಬಲಿರಾಂ ಹೆಡಗೇವಾರರು ಜನ್ಮತಃ ದೇಶಭಕ್ತ. ನಾಗಪುರದ ಕಡುಬಡತನದ ವೈದಿಕ ಕುಟುಂಬದಲ್ಲಿ ಹುಟ್ಟಿದ ಅವರಲ್ಲಿ ಎಂಟನೆಯ ವಯಸ್ಸಿನಲ್ಲೇ ದೇಶಭಕ್ತಿ ಪ್ರಕಟಗೊಂಡಿತ್ತು. ಅದು ಇಂಗ್ಲೆಂಡಿನ ರಾಣಿ ವಿಕ್ಟೋರಿಯಾಳ ಅರವತ್ತನೇ ವರ್ಷದ ಸಿಂಹಾಸನವೇರಿದ ನೆನಪಿಗಾಗಿ ಭಾರತದಲ್ಲಿ ಸಿಹಿ ಹಂಚಿದ ಸಂದರ್ಭದಲ್ಲಿ. ಬಾಲಕ ಕೇಶವ ಕೊಟ್ಟ ಸಿಹಿಯನ್ನು ಚರಂಡಿಗೆಸೆದಿದ್ದ! ಆಕೆಯ ಸಿಂಹಾಸನಾರೋಹಣಕ್ಕೆ ನಾವೇಕೆ ಸಿಹಿ ತಿನ್ನಬೇಕು? ಇಂಗ್ಲಿಷರು ನಮ್ಮನ್ನು ದಾಸ್ಯದಲ್ಲಿಟ್ಟಿರುವಾಗ ಅವರ ರಾಣಿಯ ಪಟ್ಟಾಭಿಷೇಕ ನಮಗೇಗೆ ಆನಂದ ತರುತ್ತದೆ? ಕೇಶವ ಅದು ಅಪಮಾನದ ಸಂಕೇತವೆಂದೇ ಭಾವಿಸಿದ. ಸಿಹಿಯನ್ನು ಎಸೆದು ದೇಶಭಕ್ತಿಯನ್ನು ಪ್ರಕಟಿಸಿದ್ದ. ಅದಾಗಿ ನಾಲ್ಕುವರ್ಷಕ್ಕೆ ಎಂಟನೆಯ ಎಡ್ವರ್ಡ್ ದೊರೆಯ ರಾಜ್ಯಾಭಿಷೇಕ ಕಾರ್ಯಕ್ರಮ ವೈಭವದಿಂದ ನಡೆದಿತ್ತು. ಆದರೆ ಕೇಶವ ಪರಕೀಯ ದೊರೆಯ ಸಮಾರಂಭವನ್ನು ಆಚರಿಸುವುದು ಅಪಮಾನದ ಸಂಗತಿ ಎಂದು ಭಾವಿಸಿ ಅದನ್ನು ಬಹಿಷ್ಕರಿಸಿದ. ಅತ್ಯಂತ ಪ್ರತಿಭಾವಂತನಾಗಿದ್ದ ಕೇಶವ ಓದಿದ್ದು ವೈದ್ಯಕೀಯ ಪದವಿ. ಆದರೆ ರೋಗಿಗೆ ಔಷಧಿ ಕೊಡದೆ, ಹಿಂದೂ ಸಮಾಜಕ್ಕಂಟಿದ್ದ ಗುಲಾಮಗಿರಿ, ಅನೈಕ್ಯತೆ ಮತ್ತು ಸ್ವಾಭಿಮಾನದ ಕೊರತೆಯ ರೋಗಕ್ಕೆ ಔಷಧಿಕೊಡುವ ಸಂಕಲ್ಪಮಾಡಿ ಕಟ್ಟಿದ್ದೇ ರಾಷ್ಟ್ರಿಯ ಸ್ವಯಂಸೇವಕ ಸಂಘ. ಆ ಕಾರಣಕ್ಕೆ ಡಾ. ಕೇಶವ ಬಲಿರಾಂ ಹೆಡಗೇವಾರರು ಬ್ರಹ್ಮಚಾರಿಯಾಗಿಯೇ ಉಳಿದರು. ಇಡೀ ಜೀವನ ದೇಶಕಾರ್ಯಕ್ಕೆ ಮುಡಿಪಿಟ್ಟು ಅಜೇಯ ದೇಶಭಕ್ತ ಸಂಘಟನೆಯನ್ನು



ಹುಟ್ಟುಹಾಕಿದರು. ಆಲೋಚನೆಗಳನ್ನು ಕೃತಿರೂಪಕ್ಕಿಳಿಸಿದರು. ಅದಕ್ಕಾಗಿ ತಮ್ಮಇಡೀ ಬದುಕನ್ನು ದೇಶ ಕಾರ್ಯದಲ್ಲಿ ಸಮರ್ಪಿಸಿಕೊಂಡರು.

ತೀರ ಸಾಮಾನ್ಯನಂತೆ ಕಾಣುವ ವ್ಯಕ್ತಿಯೊಬ್ಬ ಎದ್ದು ನಿಂತು ಇದು 'ಹಿಂದು ರಾಷ್ಟ್ರ' ಎಂದು ಘೋಷಿಸುತ್ತಾರೆ. ಅದರ ಸ್ವಾತಂತ್ರ್ಯ ಹಾಗೂ ಚಿರಂತನ ಸಾಮರ್ಥ್ಯಕ್ಕಾಗಿ ಹಿಂದುಗಳ ರಾಷ್ಟ್ರವ್ಯಾಪಿ ಸಂಘಟನೆ ಮಾಡುತ್ತೇನೆಂದು ಸಂಕಲ್ಪಿಸುತ್ತಾರೆ. ಅವರ ಬಳಿ ಹಣವಾಗಲಿ, ಸಾಧನ ಸಲಕರಣೆಗಳಾಗಲಿ, ಜನಬೆಂಬಲಿತ ನಾಯಕರಾಗಲಿ ಇರಲಿಲ್ಲ. ಹಿಂದು ಸಮಾಜವಾದರೋ ಹಲವಾರು ಜಾತಿ, ಮತ,ಪಂಥ, ಪ್ರಾಂತ, ಭಾಷೆಗಳ ಹೆಸರಲ್ಲಿ ಹರಿದು ಹಂಚಿ ಹೋದ ಜನ, ಜೊತೆಗೆ ಪರಕೀಯರಿಂದಾದ ದೀರ್ಘಕಾಲದ ಗುಲಾಮಗಿರಿ. ಹಿಂದುಗಳನ್ನು ಸಂಘಟಿಸುವುದು ಕಪ್ಪೆಗಳನ್ನು ತಕ್ಕಡಿಯಲ್ಲಿಟ್ಟು ತೂಗುವುದು ಎರಡೂ ಒಂದೇ ಎನ್ನುವ ಸ್ಥಿತಿ.

ಆದರೆ, ಡಾ. ಕೇಶವ ಬಲಿರಾಂ ಹೆಡಗೇವಾರರು ಅಸಾಮಾನ್ಯ ಕಲ್ಪನೆಯನ್ನು ಕೃತಿರೂಪಕ್ಕಿಳಿಸಿದರು! ಅವರು ಹೇಳುತ್ತಿದ್ದದ್ದು– ಕೃತಿಶೂನ್ಯ ಸಿದ್ಧಾಂತದಿಂದ ಈವರೆಗೂ ಯಾವುದೇ ಮಹಾತ್ಕಾರ್ಯಗಳು ಸಾಧಿತವಾಗಿಲ್ಲ, ಮುಂದೆಯೂ ಸಾಧ್ಯವಾಗುವುದು ಅಸಂಭವ.

ಇಂದು ಆರೆಸ್ಸೆಸ್ ವಿಶ್ವವ್ಯಾಪಿ ಸಂಘಟನೆಯಾಗಿ ಬೆಳೆಯಲು ಕಾರಣವಾಗಿದ್ದು ಅದರ ಸ್ಥಾಪಕ ಡಾ.ಕೇಶವ ಬಲಿರಾಂ ಹೆಡಗೇವಾರರು ತಮ್ಮ ಕಲ್ಪನೆಯನ್ನು ಕೃತಿರೂಪಕ್ಕಿಳಿಸಿ ತಮ್ಮ ಇಡೀ ಜೀವನವನ್ನು ದೇಶಮಾತೆಯ ಸೇವೆಗೆ ಸಮರ್ಪಿಸಿ, ಅವರದ್ದೇ ರೀತಿ ಆಲೋಚಿಸುವ ಮತ್ತು ದೇಶಹಿತಕ್ಕಾಗಿ ತಮ್ಮ ಜೀವಮಾನವನ್ನು ಸವೆಸುವ ಅಸಂಖ್ಯ ದೇಶಭಕ್ತರಿಗೆ ರಾಷ್ಟ್ರಕಾರ್ಯದ ದೀಕ್ಷೆಯನ್ನು ಕೊಟ್ಟಿದ್ದು.

ಹೀಗೆ ಸಮಾಜದಲ್ಲಿ ಸಂಘದ ಛಾಪು ಮೂಡಲು ಕಾರಣವಾಗಿರುವ ಅನೇಕ ಸಂಗತಿಗಳಿವೆ. ಕಾಲಕಾಲಕ್ಕೆ ಸಂಘದ ಸ್ವಯಂಸೇವಕರು ಮಹತ್ವಪೂರ್ಣ ರಾಷ್ಟ್ರೀಯ ಸಮಸ್ಯೆಗಳನ್ನು ಎತ್ತಿಕೊಂಡು ಜನಜಾಗೃತಿಗಾಗಿ ದೇಶವ್ಯಾಪಿ ಅಭಿಯಾನಗಳನ್ನು ನಡೆಸಿದ್ದಾರೆ. ಅದೇ ರೀತಿ ಮಾನವ ನಿರ್ಮಿತ ಮತ್ತು ಪ್ರಾಕೃತಿಕ ವಿಪತ್ತುಗಳು ನಡೆದಾಗ ಪ್ರತಿ ಸಂದರ್ಭದಲ್ಲೂ ತುರ್ತು ಕರೆಗೆ ಓಗೊಟ್ಟಿದ್ದಾರೆ. ರಾಷ್ಟ್ರಜೀವನದ ವಿಭಿನ್ನ ಕ್ಷೇತ್ರದಲ್ಲಿ ದೊಡ್ಡ ದೊಡ್ಡ ಜನಸಂಘಟನೆಗಳನ್ನು ಕಟ್ಟಿ ಬೆಳೆಸಿ ನಾಡಿನ ಕೋಟ್ಯಾಂತರ ಜನರ ಅಂತಃಕರಣದಲ್ಲಿ ಅಚ್ಚಳಿಯದ ಪ್ರಭಾವ ಬೀರಿದ್ದಾರೆ. ಇಡೀ ಜಗತ್ತಿಗೆ ಅಡವರಿಸಿದ ಕೊರೋನಾ ಎಂಬ ಮಹಾ ಮಾರಿಯ ಅಟ್ಟಹಾಸದ ಕಾಲಘಟ್ಟದಲ್ಲೂ 3.42 ಲಕ್ಷ ಸ್ವಯಂಸೇವಕರು ಮಹಾಮಾರಿಯ ಭಯ ದೂರವಿಟ್ಟು 67 ಸಾವಿರ ಸ್ಥಳಗಳಿಗೆ 50.5 ಲಕ್ಷದಷ್ಟು ರೇಷನ್ ಕಿಟ್ ವಿತರಿಸಿ ಸಮಾಜ ಬಂಧುಗಳ ನೆರವಿಗೆ ಧಾವಿಸಿದ್ದಾರೆ.

ಸಂಘದ ಉದ್ದೇಶವೇ ನಿಸ್ವಾರ್ಥ ಸೇವೆ. ಅದನ್ನು ಗಮನಸಿದ ಸಮಾಜದ ಗಣ್ಯರು RSS ಎಂದರೆ Ready for Selfless Service ಎಂಬ ಉಪಮೆಯಿಂದ ಕರೆದದ್ದು ಸಂಘದ ಸ್ವಯಸೇವಕರಿಗೆ ಅಲ್ಲಿ ದೊರೆಯುವ ದೇಶಭಕ್ತಿ ಮತ್ತು ನಿಸ್ವಾರ್ಥ ಸೇವೆಯ ಶಿಕ್ಷಣದ ಕಾರಣಕ್ಕೆ.

ಸಂಘದೊಡನೆ ಬೆಸೆದು ಎರಡು ಮೂರು ದಶಕಗಳ ಒಡನಾಟದಲ್ಲಿ ಜೊತೆಯಾಗಿ ಸೇವಾ ಚಟುವಟಿಕೆಯಲ್ಲಿ ತೊಡಗಿಕೊಂಡ ಒಡನಾಡಿ ಸ್ವಯಂಸೇವಕ ಕಾರ್ಯಕರ್ತನ ಜಾತಿಯಾವುದೆಂದು ತಿಳಿಯದ ಅಥವಾ ತಿಳಿಯುವ ಕುತೂಹಲವೂ ಇಲ್ಲದ ಹೊರಗಿನ ವಾತಾವರಣದಲ್ಲಿ ಹಿಂದು ಸಮಾಜವನ್ನು ಕಾಡುತ್ತಿರುವ ಸ್ಪೃಶ್ಯ–ಅಸ್ಪೃಶ್ಯ ಭಾವದ ಆಚರಣೆಯು ಸಂಘದಲ್ಲಿ ಲವಶೇಷವೂ ಕಾಣುವುದಿಲ್ಲ ಎನ್ನುವುದು ಸಂಘದ ಆಯಾ ಕಾಲಘಟ್ಟದಲ್ಲಿ ಅದರ ಸಂಪರ್ಕಕ್ಕೆ ಬಂದ ಅನೇಕ ಮಹನೀಯರ ಅನುಭವವೇದ್ಯ ಮಾತು.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ 1939 ರ ಸಂಘದ ಶಿಬಿರಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಹೇಳಿದ್ದು– "ಇತರರ ಜಾತಿ ತಿಳಿಯುವ ಗೊಡವೆಯೇ ಇಲ್ಲದೇ ಸಂಪೂರ್ಣ ಸಮಾನತೆ, ಸಹೋದರತೆಗಳ ಭಾವನೆಗಳಿಂದ ಸ್ವಯಂಸೇವಕರು ವ್ಯವಹರಿಸುವುದನ್ನು ಕಂಡು ನನಗೆ ಆಶ್ಚರ್ಯವೆನಿಸಿತು" ಎಂದು. "ಇಂದು ರೂಪುಗೊಳ್ಳುತ್ತಿರುವ ಸಾಮಾಜಿಕ ಪರಿವರ್ತನೆಯ ಮುಂಚೂಣಿಯಲ್ಲಿರುವ ಕ್ರಾಂತಿಕಾರಿ ಸಂಘಟನೆ ನಿಮ್ಮದು. ಜಾತೀಯತೆಯನ್ನು ಕೊನೆಗಾಣಿಸುವ ಹಾಗೂ ದೀನದಲಿತರ ಕಣ್ಣೀರನ್ನು ಒರೆಸಬಲ್ಲ ಸಾಮರ್ಥ್ಯ ನಿಮ್ಮಲ್ಲಿ ಮಾತ್ರವಿದೆ" ಎಂದು 1977ರಲ್ಲಿ ಸಂಘದ ಸಂಪರ್ಕಕ್ಕೆ ಬಂದ ಲೋಕ ನಾಯಕ ಜಯಪ್ರಕಾಶ್ ನಾರಾಯಣರು ಹೇಳಿದ ಮಾತು.

ಸ್ವತಃ ಮಹಾತ್ಮಗಾಂಧೀಜಿಯವರು ವಾರ್ಧಾದಲ್ಲಿ ನಡೆಯುತ್ತಿದ್ದ ಸಂಘದ ಶಿಬಿರಕ್ಕೆ ಭೇಟಿ ನೀಡಿದಾಗ ಜಾತಿಯ ತಾರತಮ್ಯ ಕಾಣದನ್ನು ನೋಡಿ ಅವರು ಡಾ. ಹೆಡಗೇವಾರರಲ್ಲಿ ಕೇಳಿದ ಮಾತು ಐತಿಹಾಸಿಕವಾಗಿದ್ದು– "ಕಾಂಗ್ರೆಸ್ಸಿನಲ್ಲಿದ್ದುಕೊಂಡೇ ನೀವು ಸ್ವಯಂಸೇವಕರ ದಳವನ್ನೇಕೆ ಕಟ್ಟಲಿಲ್ಲ? ಪ್ರತ್ಯೇಕವಾಗೇಕೆ ಕಟ್ಟಿದಿರಿ?" ಎಂದಾಗ ಡಾ.ಹೆಡ್ಗೆವಾರರು ಹೇಳಿದ್ದು–"ಸ್ವಯಂಸೇವಕನಿಗೆ ಸಂಬಂಧಿಸಿದಂತೆ ನನ್ನ ಕಲ್ಪನೆಯೇ ಬೇರೆ. ಸ್ವಾರ್ಥ ಬಿಟ್ಟು ದೇಶಕ್ಕಾಗಿ ಸ್ವತಃ ಮುಂದಾಗಿ ಕೆಲಸ ಮಾಡುವವರನ್ನು ತಯಾರು ಮಾಡಬೇಕೆಂಬುದೇ ನನ್ನಇಚ್ಛೆ. ಆದರೆ ಈ ಕೆಲಸ ರಾಜಕೀಯ ಪಕ್ಷದ ಒಂದು ಭಾಗವಾಗಿ ಮಾಡಲು ಸಾಧ್ಯವಿಲ್ಲ. ಸಮರ್ಪಿತ ನಿಸ್ವಾರ್ಥ ಕಾರ್ಯಕರ್ತರ ಭರವಸೆಯ ಮೇಲೆಯೇ ರಾಷ್ಟ್ರದ ಎಲ್ಲಾ ಕ್ಷೇತ್ರಗಳ ಏಳ್ಗೆ ಸಾಧ್ಯ" ಎಂದು.

ಇದೇ ಪ್ರಶ್ನೆಯನ್ನು ಕೆಲವೊಮ್ಮೆ ಸ್ವಯಂಸೇವಕರು ಹೆಡಗೇವಾರರಲ್ಲಿ ಕೇಳಿದಾಗ ಅವರು ಬೇರೊಂದು ರೀತಿಯಲ್ಲಿ ಉತ್ತರಿಸುತ್ತಾ ? "ನೋಡಿ, ನಾವೀಗ ವಿದ್ಯುತ್ತಿನ ಉತ್ಪಾದನೆಯಲ್ಲಿ ತೊಡಗಿದ್ದೇವೆ. ಮುಂದೆ ದೇಶದ ಕಲ್ಯಾಣಕ್ಕಾಗಿ ಹಲವಾರು ವಿಧದ ಕೆಲಸಗಳಿಗಾಗಿ ಈ ಶಕ್ತಿಯನ್ನು ಪೂರೈಸುವ ಕಾರ್ಯ ಇದರಿಂದ ಆಗಲಿದೆ" ಎಂದು. ಅವರ ಮಾತು ದಶಕಗಳ ನಿರಂತರ

*2ನೇ ಪುಟಕ್ಕೆ...*

ಸಂಸ್ಮರಣೆ

# ಸಮರ್ಥ ರಾಮದಾಸ

ಶ್ರೀರಾಮನ ಅನನ್ಯ ಭಕ್ತರಾಗಿ, ಸಮಾಜದಲ್ಲಿ ಹಿಂದೂ ಸಮಾಜದ ಪುನರುದ್ಧಾರಕರಾಗಿ, ನೈತಿಕ ಶಾರೀರಿಕ ಮತ್ತು ಆಧ್ಯಾತ್ಮಿಕ ಬಲಗಳ ಉಪಾಸಕರಾಗಿ ಹನ್ನೆರಡು ವರುಷಗಳ ತಪಸ್ಸಿನಿಂದ ಶ್ರೀರಾಮನನ್ನು ಸಾಕ್ಷಾತ್ಕರಿಸಿಕೊಂಡವರು. ಸಜ್ಜನಗಡದಲ್ಲಿ ನೆಲೆಸಿ, ಜನರಲ್ಲಿ ಧರ್ಮ, ಅಧ್ಯಾತ್ಮ ಚಿಂತನೆಯನ್ನು ಪಸರಿಸಿದರು. ಮೊಘಲರೊಡನೆ ಹೋರಾಡಿ ಅವರನ್ನು ದೇಶದಿಂದೋಡಿಸಿ ಹಿಂದೂ ಸಾಮ್ರಾಜ್ಯ ಪುನಃಸ್ಥಾಪನೆ ಮಾಡುವ ಉದ್ದೇಶದಿಂದ ಕಾರ್ಯಪ್ರವೃತ್ತನಾದ ಶಿವಾಜಿ ಮಹಾರಾಜರಿಗೆ ಅಧ್ಯಾತ್ಮಿಕ ಗುರುಗಳಾಗಿ ಧರ್ಮ ಬೋಧನೆ ಮಾಡಿದವರು. ಸಾಧು ಸಜ್ಜನರಲ್ಲಿ ಯಾವಾಗಲೂ ಕಂಡು ಬರುವ ದಯಾಶೀಲತ್ವವೂ ವಿರಕ್ತಿಯೂ ಭಕ್ತಿಯೂ ಶ್ರೀಸಮರ್ಥರಲ್ಲಿ ಇದ್ದದ್ದಲ್ಲದೆ ಇವರು ತಮ್ಮ ಅತ್ಯಂತ ದೃಢನಿಶ್ಚಯದಿಂದಲೂ ಪ್ರಖರವಾದ ತಪೋಬಲದಿಂದಲೂ ಬಾಲಾಭ್ಯಾಸದಿಂದ ಸಂಪಾದಿಸಿದ್ದ ಮನೋನಿಗ್ರಹದಿಂದಲೂ ಸಮರ್ಥ ಸಂಪ್ರದಾಯದ ಅಧ್ವರ್ಯುಗಳಾಗಿಯೂ ಲೋಕ ಪ್ರಸಿದ್ಧರಾಗಿದ್ದರು.

ಶ್ರೀಸಮರ್ಥ ರಾಮದಾಸ ಸ್ವಾಮಿಗಳ ಜನ್ಮವು 1608 ರಲ್ಲಿ ಪುಣೆ ಜಿಲ್ಲೆಗೆ ಸೇರಿದ ಜಾಂಬಳಗಾಂವ ಎಂಬ ಊರಲ್ಲಿ ಆಯಿತು. ಇವರ ಪೂರ್ವದ ಹೆಸರು ನಾರಾಯಣ. ಇವರ ತಂದೆ ಜಾಂಬಳದ ಕುಲಕರ್ಣಿಯಾದ ಸೂರ್ಯಾಜಿ ಪಂತ ಮತ್ತು ತಾಯಿಯ ಹೆಸರು ರಾಣೂಬಾಯಿ. ಸೂರ್ಯಾಜಿ ಪಂತರು ಶ್ರೀ ಸಮರ್ಥರು ಹುಟ್ಟಿದ ವರ್ಷ ಪ್ರತಿವರ್ಷದಂತೆ ಜ್ಞಾನೇಶ್ವರರ ಪುಣ್ಯತಿಥಿಯ ನಿಮಿತ್ತವಾಗಿ ಏಕನಾಥ ಮಹಾರಾಜರ ದರ್ಶನಕ್ಕೆ ಹೋದಾಗ ಅವರು ಸೂರ್ಯಾಜಿಗೆ ಬಹಳ ಸನ್ಮಾನಪೂರ್ವಕವಾಗಿ ಸ್ವಾಗತ ಮಾಡಿಸ್ವಾಗತಿಸಿ ಅವರ ಮಡಿಲಲ್ಲಿದ್ದ ಮಗು ನಾರಾಯಣನನ್ನು ಎತ್ತಿ ಮುದ್ದಾಡಿಸಿ "ಪಂತರೇ, ನೀವು ಧನ್ಯರು! ನಿಮ್ಮ ವಂಶವೆಲ್ಲಾ ಧನ್ಯ! ನಿಮ್ಮ ಉಪಾಸನೆಗೂ ಭಕ್ತಿಗೂ ಎಣೆ ಇಲ್ಲ! ಅಂತೇ ನಿಮಗೆ ವಾಯುಪುತ್ರ (ಮಾರುತಿಯ) ಅಂಶದ ಈ ಪುತ್ರನು ಜನಿಸಿದನು. ಸಾಕ್ಷಾತ್ ಶಿವನು ಅರಸನಾಗಿ ಹುಟ್ಟುವ ಅವನ ಕೈಯಿಂದ ನಿಮ್ಮ ಮಗನು ಪಾಪಿಗಳಿಂದಾದ ಭೂಭಾರವನ್ನು ಹರಣಮಾಡುವ" ಎಂದೇ ಭವಿಷ್ಯ ನುಡಿದಿದ್ದರು.



ನಾರಾಯಣ ಏಳು ವರ್ಷದವನಿದ್ದಾಗ ತಂದೆ ಸೂರ್ಯಾಜಿಪಂತ್ ತೀರಿಕೊಂಡರು. ಮನೆಯ ಆರ್ಥಿಕ ಸ್ಥಿತಿ ಚೆನ್ನಾಗಿತ್ತು. ಆದರೆ ನಾರಾಯಣನಿಗೆ ಬಾಲ್ಯದಿಂದಲೇ ವಿರಕ್ತ ಮನೋಭಾವ. ಅತಿಶಯ ಬುದ್ಧಿವಂತ, ದೃಢನಿಶ್ಚಯೀ ಆದರೆ ಅಷ್ಟೇ ತುಂಟನಾಗಿದ್ದನು. ನಾರಾಯಣ ಬಾಲ್ಯದಲ್ಲಿ ಸಾಹಸಮಯರಾಗಿದ್ದರು. ಮರಗಳ ಮೇಲಿಂದ ಜಿಗಿಯುವುದರಲ್ಲಿ, ಪ್ರವಾಹದಲ್ಲಿ ಈಜುವುದರಲ್ಲಿ, ಕುದುರೆ ಸವಾರಿಯಲ್ಲಿ ನಿಪುಣನಾಗಿದ್ದ. ಅವನಿಗೆ ಎಂಟು ಜನ ಸ್ನೇಹಿತರಿದ್ದರು. ಒಬ್ಬ ಸ್ನೇಹಿತ ಬಡಗಿಯ ಮಗ ಮತ್ತು ಇನ್ನೊಬ್ಬ ಮೇಸ್ತ್ರಿ. ಈ ಗೆಳೆಯರ ಒಡನಾಟದಲ್ಲಿ ನಾರಾಯಣನಿಗೆ ಬಾಲ್ಯದಲ್ಲಿಯೇ ಈ ವೃತ್ತಿಗಳ ಬಗ್ಗೆ ಉತ್ತಮ ಜ್ಞಾನವಿತ್ತು. ಅವರು ವೀಕ್ಷಣೆ ಮತ್ತು ಅನುಭವದಿಂದ ಎಲ್ಲವನ್ನೂ ಕಲಿತರು. 12ನೇ ವಯಸ್ಸಿನಲ್ಲಿ ಮದುವೆ ನಿಶ್ಚಯವಾಯಿತು. ಮದುವೆ ಸಮಾರಂಭದಲ್ಲಿ ಪುರೋಹಿತರು "ಸಾವಧಾನ" ಎಂಬ ಪದವನ್ನು ಉಚ್ಚರಿಸಿದ ತಕ್ಷಣ, ನಾರಾಯಣ ಮದುವೆಯ ಸಭಾಂಗಣದಿಂದ ಹೊರಟರು.

ಅಲ್ಲಿಂದ ಕಾಲ್ನಡಿಗೆಯಲ್ಲಿ ರಾಮದಾಸರು ಪಂಚವಟಿಗೆ ಬಂದು ರಾಮನ ದರ್ಶನ ಪಡೆದು 40 ವರ್ಷಗಳ ಕಾಲ ತಪಸ್ಸು ಮಾಡಿದರು. 12ನೇ ವಯಸ್ಸಿನಲ್ಲಿ ನಾಸಿಕ್‌ಗೆ ಬಂದ ಸಮರ್ಥರು 12 ವರ್ಷ ತಪಸ್ಸು ಮಾಡಿದರು. ಸಮರ್ಥರು ವಿದ್ಯಾರ್ಥಿ ಸ್ಥಿತಿಯಲ್ಲಿದ್ದಾಗಲೇ ಸ್ವಯಂಪ್ರೇರಿತವಾಗಿ ತಮ್ಮನ್ನು ತಾವು ಸ್ವಯಂ ಶಿಸ್ತಿಗೆ ಒಳಪಡಿಸಿಕೊಂಡು ಆಧ್ಯಾತ್ಮಿಕತೆಯ ದಾರಿಗೆ ತೆರೆದುಕೊಂಡಿದ್ದರು. ತಮ್ಮ ಸನ್ಯಾಸದ ಸಾಧನೆಯ ಸಮಯದಲ್ಲಿ ಸಮರ್ಥರು ಮಧ್ಯಾಹ್ನ 5 ಮನೆಗಳಲ್ಲಿ ಮಾತ್ರ ಭಿಕ್ಷೆ ಬೇಡಿಕೊಂಡು ಶ್ರೀರಾಮನಿಗೆ ಅರ್ಪಿಸುತ್ತಿದ್ದರು. ಅದರಲ್ಲಿ ಸ್ವಲ್ಪ ಭಾಗವನ್ನು ಪ್ರಾಣಿ ಪಕ್ಷಿಗಳಿಗೆ ಇಟ್ಟು ಉಳಿದ ಭಾಗವನ್ನು ಸೇವಿಸುತ್ತಿದ್ದರು. ಸಮರ್ಥರು ಮಧ್ಯಾಹ್ನ ಎರಡು ಗಂಟೆಗಳ ಕಾಲ ದೇವಸ್ಥಾನದಲ್ಲಿ ಶ್ರವಣ ಸಾಧನೆ ಮಾಡುವರು ಮತ್ತು ನಂತರದ ಎರಡು ಗಂಟೆಗಳ ಕಾಲ ಶಾಸ್ತ್ರಗಳ ಅಧ್ಯಯನದಲ್ಲಿ ತೊಡಗುವರು. ಈ ಅವಧಿಯಲ್ಲಿ, ಅವರು ವೇದಗಳು, ಉಪನಿಷತ್ತುಗಳು, ಎಲ್ಲಾ ಪ್ರಾಚೀನ ಪುಸ್ತಕಗಳು ಮತ್ತು ವಿವಿಧ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿದರು, ರಾಮಾಯಣವನ್ನು ರಚಿಸಿದರು.

ಸಾಧನೆಯ ಸಮಯದಲ್ಲಿ, ಅವರು ಶ್ರೀರಾಮನನ್ನು ಆರ್ತತೆಯಿಂದ ಪ್ರಾರ್ಥಿಸಿದರು ಮತ್ತು ಅದೆ 'ಕರುಣಾಷ್ಟಕ'ವಾಯಿತು. ಸಮರ್ಥರ ಜೀವನದಲ್ಲಿ ವ್ಯಾಯಾಮ, ಪೂಜೆ ಮತ್ತು ಅಧ್ಯಯನ ಈ ಮೂರೂ ವಿಷಯಗಳಿಗೆ ಮಹತ್ವದ ಸ್ಥಾನವಿತ್ತು. ಅವರ ಜೀವನದ ಈ 12 ವರ್ಷಗಳು ಅತ್ಯಂತ ಶಿಸ್ತಿನ ಆರಾಧನೆಯಲ್ಲಿ ಕಳೆದವು. 12 ವರ್ಷಗಳ ತೀವ್ರ ತಪಸ್ಸಿನ ನಂತರ ಅವರು ಆತ್ಮಸಾಕ್ಷಾತ್ಕಾರವನ್ನು ಪಡೆದರು. 24ರ ತರುಣ ಆತ್ಮಜ್ಞಾನ ಸಿದ್ಧಿಸಿಕೊಂಡ 'ಸಮರ್ಥ ರಾಮದಾಸ' ನೆನೆಸಿದರು. ಸಮರ್ಥರು ನಾಸಿಕ್‌ನ ಟಾಕ್ಲಿಯಲ್ಲಿ ಹನುಮಂತನ ವಿಗ್ರಹವನ್ನು ಸ್ಥಾಪಿಸಿದರು. ಬಲಹೀನ ಗೊಂಡ ನಿಸ್ತೇಜದಿಂದ ಬಳಲುತ್ತಿದ್ದ ಸಮಾಜಕ್ಕೆ ಶಕ್ತಿ ಚೈತನ್ಯಗಳನ್ನು ತುಂಬಿ ಅದರಲ್ಲಿ ನವಶಕ್ತಿಯ ಸ್ಫುರಣವಾಗಲು ಹನುಮಂತ ಶಕ್ತಿ ಯುಕ್ತಿ ಬುದ್ಧಿಮತ್ತೆ ವಿವೇಕಗಳ ಮತ್ತು ನಾಯಕತ್ವಗಳ ಸಾಕಾರ ಮೂರ್ತಿ. ಆತನ ಆರಾಧನೆ ಹಿಂದೂ ಸಮಾಜದ ಕ್ಲೈಬ್ಯವನ್ನು ಹೊಡೆದೋಡಿಸಿ ಅದರ ನಿಜ ಸ್ವರೂಪದ ಅನಾವರಣಕ್ಕೆ ಸಾಧಕ ಎಂದು ಮನಗಂಡ ಸಮರ್ಥರು ಗ್ರಾಮ ಗ್ರಾಮಗಳಲ್ಲಿ ಹನುಮಂತನ ಆರಾಧನೆ ನಡೆಸುವ ಪರಿಪಾಠ ಜಾರಿಗೆ ತಂದರು.

ತಪಸ್ಸು ಮುಗಿದ ನಂತರ ಅವರು 12 ವರ್ಷಗಳ ಕಾಲ ಭಾರತದ ಉದ್ದಗಲಕ್ಕೂ ಪ್ರಯಾಣಿಸಿದರು, ತೀರ್ಥಯಾತ್ರೆಗಳನ್ನು ಮಾಡಿದರು. ಇಡೀ ಹಿಂದೂಸ್ಥಾನದ ಮೂಲೆಮೂಲೆಯನ್ನು ಅವರ ಪಾದಗಳಡಿಯಿಂದ ಸ್ಪರ್ಶಿಸಿದರು. ಪ್ರತಿ ಸ್ಥಳದ ಸಾರ್ವಜನಿಕ ಸ್ಥಿತಿಗತಿಯನ್ನು ಪ್ರತ್ಯಕ್ಷ ವೀಕ್ಷಿಸಿದರು. ನಂತರ, ಅವರು ಹಿಮಾಲಯಕ್ಕೆ ತಲುಪಿದಾಗ ಅವರ ಮೂಲ ನಿರ್ಲಿಪ್ತ ಭಾವವು ಎಚ್ಚರವಾಯಿತು. ಅವರ ದೇಹಭಾವ ಸಂಪೂರ್ಣವಾಗಿ ನಾಶವಾಯಿತು. ರಾಮಚಂದ್ರನ ದರ್ಶನ ದೊರಕಿತು, ಆತ್ಮಸಾಕ್ಷಾತ್ಕಾರವಾಯಿತು. ಭಾರತ ಭ್ರಮಣದ ಸಂದರ್ಭದಲ್ಲಿ ಶ್ರೀನಗರದಲ್ಲಿ ಆರನೇ ಸಿಖ್ ಗುರು ಹರಗೋಬಿಂದ್ ಮತ್ತು ಸಮರ್ಥರು ಭೇಟಿಯಾದರು. ಇಬ್ಬರೂ ಹಿಂದೂ ಸಮಾಜದ ಅಂದಿನ ದುಸ್ಥಿತಿಯ ಬಗ್ಗೆ ಚರ್ಚೆ ನಡೆಸಿದರು. ದುರ್ಬಲ ವ್ಯಕ್ತಿಗೆ ಈ ಜಗತ್ತಿನಲ್ಲಿ ಬೆಲೆಯಿಲ್ಲ. ನಾವು ಬಲಶಾಲಿಯಾಗಬೇಕು. 'ಸಮಾನ–ಶೀಲ–ವ್ಯಸನೇಷು ಸಖ್ಯಮ್' ಎಂಬ ಸಮಾನ ವಿಚಾರ ಅವರಿಬ್ಬರನ್ನೂ ಇನ್ನಷ್ಟು ಆತ್ಮೀಯರನ್ನಾಗಿಸಿತು.

ಸಮರ್ಥರ ಶಿಷ್ಯಗಣದಲ್ಲಿ ಎಲ್ಲಾ ತರಹದ ಶಿಷ್ಯರೂ ಇದ್ದರು. ಸಮರ್ಥರಿಗೆ ಒಂದು ವಿಶೇಷತೆಯಿತ್ತು – ಎದುರಿಗಿರುವವರ ಸ್ತರಕ್ಕೆ ಅವರ ಸ್ವಭಾವ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿ ಅವರ ಜೀವನೋದ್ಧಾರದ ಮಾರ್ಗವನ್ನು ತಿಳಿಸುವರು. ಸಮರ್ಥರ ಉಪದೇಶ ಭಾಷೆ ತುಂಬಾ ಸರಳವಾಗಿತ್ತು. ಆಡುಭಾಷೆಯಲ್ಲಿತ್ತು. ಹರಿಕಥೆ ಭಜನೆ, ಸಾಮಾಜಿಕ ರಾಜಕೀಯ ಜಾಗೃತಿ; ವಿವೇಕ ಮತ್ತು ಸಾಕ್ಷೇಪದ ತತ್ವಗಳ ಆಧಾರದ ಮೇಲೆ ಕೆಲಸ ಮಾಡುವ 'ರಾಮದಾಸಿ' ಪಂಥವನ್ನು ರಚಿಸಿದರು. ಈ ಮೂಲಕ ಜನಸಂಘಟನೆಯನ್ನು ಕಟ್ಟುವ ಮೂಲಕ ತಾವು ಹಾಕಿಕೊಂಡ ಸಮಾಜೋದ್ಧಾರದ ಕೆಲಸವನ್ನು ಸಾಧಿಸಿದರು.

ಆಸೇತುಹಿಮಾಚಲ ಮಠಮಹಾಂತಗಳನ್ನು ಪುನರ್ ರಚಿಸುವ ಮೂಲಕ, ಶ್ರದ್ಧಾ ಭಕ್ತಿಗಳ ಹೊಸ ಧಾರೆಯನ್ನೇ ಹರಿಸಿದರು. ನಿರ್ಭೀತ – ನಿಸ್ಪೃಹ ನಾಯಕತ್ವವನ್ನು ಹುಟ್ಟುಹಾಕುವ ಮೂಲಕ ರಾಷ್ಟ್ರನಿರ್ಮಾಣ ಕಾರ್ಯಕ್ಕೆ ಪೂರಕವಾದ ವಾತಾವರಣವನ್ನೇ ಸೃಷ್ಟಿಸಿದರು. ರಾಜಸತ್ತೆ ಮತ್ತು ಸಮಾಜಾಸತ್ತೆಗಳ ಅಪೂರ್ವ ಸಂಯೋಜನೇ ಹಾಗೂ ಸಮನ್ವಯಗಳ ಮೂಲಕ ಬಲಿಷ್ಠ ಜರ್ಜರಿತ ಮತ್ತು ಸೋತುಹೋದೆನೆಂಬ ಹೀನಭಾವದಲ್ಲಿ ಮುಳುಗಿ ಹೋಗಿದ್ದ ಸಮಾಜವನ್ನು ಅದರ ಹೀನಭಾವ ಹಾಗೂ ದೈನ್ಯತೆಗಳಿಂದ ಮೇಲೆತ್ತಿದರು. ಸಮರ್ಥರು ರಾಷ್ಟ್ರನಿರ್ಮಾಣಕ್ಕೆ ಅಮೂಲ್ಯವಾದ ಮಾರ್ಗದರ್ಶನ ನೀಡಿದಂತೆ, ಅವರು ಸಾರ್ವಜನಿಕ ಶಿಕ್ಷಣ, ದಾನ, ಪರಹಿತಚಿಂತನೆಗಳಂತಹ ಲೌಕಿಕದ ಬಗ್ಗೆಯೂ ಒತ್ತು ನೀಡಿದರು; ಏಕೆಂದರೆ ರಾಷ್ಟ್ರವೊಂದರ ಉಳಿವು ಸ್ವರಾಜ್ಯದ ಸಂಸ್ಥಾಪನೆ ಜನರ ಅಂತರ್ ಬಾಹ್ಯ ಜಾಗೃತಿಯ ಮೇಲೆಯೇ ನಿಂತಿದೆ. ವಿದ್ಯಾವಂತ ಸಮಾಜವೇ ಇದಕ್ಕೆ ಪೂರಕ ಎಂದು ಸಾಮಾನ್ಯರ ಓದು ಬರಹಕ್ಕೆ ಅಭಿಯಾನ ಆರಂಭಿಸಿದರು.

ಸಮರ್ಥರು ಮಾಘ ವದ್ಯ ನವಮಿ ಶಕ ಹದಿನಾರನೂರ ಮೂರು ವರ್ಷ ಸನ್ 1681ರಲ್ಲಿ ಪೂರ್ವ ಸೂಚನೆಯೊಂದಿಗೆ ತಮ್ಮ ದೇಹವನ್ನು ತ್ಯಜಿಸಿದರು. ಇದು ದಾಸನವಮಿ ಎಂದು ಅವರ ಭಕ್ತರಿಂದ ಆಚರಿಸಲ್ಪಡುತ್ತದೆ.

*1ನೇ ಪುಟದಿಂದ...*

## ಡಾ. ಕೇಶವ ಬಲಿರಾಂ ಹೆಡಗೇವಾರ್

ಪರಿಶ್ರಮದಿಂದ ನಿಜವಾಗಿದೆ. ಅನೇಕ ಸಂಘಟನೆಗಳು ಹುಟ್ಟಿ ಅದರ ವಾರ್ಷಿಕೋತ್ಸವವನ್ನೂ ಕಾಣದೆ ಕಾಲಗರ್ಭದಲ್ಲಿ ಲೀನವಾಗುವಾಗ ಮುಂದಿನ 2025 ನೇ ವರ್ಷಕ್ಕೆ ನೂರು ವಸಂತಗಳನ್ನು ಪೂರೈಸಿ ಶತಮಾನೋತ್ಸವವನ್ನು ಪೂರೈಸುವತ್ತ ಸಾಗಿ ಅಖಂಡವಾಗಿ ಉಳಿದಿರುವ ಜಗತ್ತಿನ ಏಕೈಕ ಸಂಘಟನೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಎಂದರೆ ಅದು ಅತಿಶಯೋಕ್ತಿಯೇನಲ್ಲ!

ಡಾಕ್ಟರ್ ಹೆಡಗೇವಾರರು ಕೇವಲ 15–20 ಜನರನ್ನು ಸೇರಿಸಿಕೊಂಡು ಕಟ್ಟಿದ ರಾಷ್ಟ್ರೀಯ ಸ್ವಯಂಸೇವಕ ಸಂಘ ಇಂದು ಅದು ಪ್ರವೇಶಿಸದ ಕ್ಷೇತ್ರವಿಲ್ಲ. ಸಂಘದ ಏಕತೆಯ ಚಿಂತನೆಯನ್ನಿಟ್ಟುಕೊಂಡು ಜಗತ್ತಿನ 35 ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಸಂಘದ ಚಟುವಟಿಕೆಗಳು ನಡೆಯುತ್ತಿವೆ. ಧರ್ಮಕ್ಷೇತ್ರದಲ್ಲಿ ವಿಶ್ವ ಹಿಂದೂ ಪರಿಷದ್, ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾಭಾರತಿ, ಸೇವಾಭಾರತಿ, ವನವಾಸಿ ಕಲ್ಯಾಣ, ಮಹಿಳಾ ಕ್ಷೇತ್ರದಲ್ಲಿ ರಾಷ್ಟ್ರ ಸೇವಿಕಾ ಸಮಿತಿ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷದ್, ಸಾಹಿತ್ಯ ಕ್ಷೇತ್ರದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮ ವಿಕಾಸ ಕೇಂದ್ರ ರಾಜಕೀಯ ಕ್ಷೇತ್ರದಲ್ಲಿ ಭಾರತೀಯ ಜನತಾ ಪಕ್ಷ ಜೊತೆಗೆ ಸಾವಿರಾರು ಸೇವಾ ಚಟುವಟಿಕೆಗಳ ಮೂಲಕ ಸಂಘ ತನ್ನ ಛಾಪನ್ನು ಮೂಡಿಸಿದೆ.

ಯಾವುದೇ ಉನ್ನತ ಹಿನ್ನೆಲೆ ಇಲ್ಲದ ಸಾಮಾನ್ಯ ವ್ಯಕ್ತಿಗಳು ಸಂಘದ ಸಂಪರ್ಕಕ್ಕೆ ಬಂದು ಸ್ವಯಂಸೇವಕರಾಗಿ ನಂತರ ಕಾರ್ಯಕರ್ತರಾಗಿ ಬೆಳೆದು ದೇಶದ ಸಾಂವಿಧಾನಿಕ ಹುದ್ದೆಗಳನ್ನು ಅಲಂಕರಿಸಿ, ದೇಶವನ್ನು ಮುನ್ನಡೆಸಲು ಸಮರ್ಥರನ್ನಾಗಿಸಿದ್ದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಹೆಗ್ಗಳಿಕೆ. ಈಗ ದೇಶದ ಪ್ರಧಾನಿ, ರಾಷ್ಟ್ರಪತಿ,ಉಪರಾಷ್ಟ್ರಪತಿ, ಅನೇಕ ರಾಜ್ಯಗಳ ಮುಖ್ಯಮಂತ್ರಿಗಳೆಲ್ಲ ಸಂಘದ ಹಿನ್ನೆಲೆಯಿಂದ ಬಂದವರು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಅದಾಗ್ಯೂ ಸಂಘದ ಗುರಿ ಕೇವಲ ತನ್ನ ಸ್ವಯಂಸೇವಕರನ್ನು ಉನ್ನತ ಹುದ್ದೆಗಳಲ್ಲಿ ಪ್ರತಿಷ್ಠಾಪಿಸುವುದಾಗಿರದೆ, ಸಂಘದಲ್ಲಿ ಪ್ರತಿನಿತ್ಯ ಹೇಳುವ ಪ್ರಾರ್ಥನೆಯ ಆಶಯದಂತೆ "ಪರಂ ವೈಭವಂ ನೇ ತುಮೇತತ್ ಸ್ವರಾಷ್ಟ್ರಂ" ಎನ್ನುತ್ತಾ ಭಾರತವನ್ನು ಪರಮ ವೈಭವಕ್ಕೇರಿಸುವುದೇ ಸಂಘದ ಸಂಕಲ್ಪಿತ ಗುರಿ ಎನ್ನುವುದರಲ್ಲಿ ಎರಡು ಮಾತಿಲ್ಲ! ನಕಾರಾತ್ಮಕ ಆಲೋಚನೆಗಳಿಂದ ಪ್ರಭಾವಿತರಾದವರು ಇಲ್ಲಿನ ಸಾಮಾಜಿಕ ಪಿಡುಗುಗಳು, ಬಡತನ, ಕಷ್ಟ ಕೋಟಲೆಗಳಿಗೆ ನೊಂದು ತನ್ನ ಈ ಸ್ಥಿತಿಗೆ ತನ್ನದೇ ಸಮಾಜವನ್ನು ದೂಷಿಸುತ್ತಾರೆ ಆ ಸಮಾಜದ ಜನರೊಂದಿಗೆ ಸಂಘರ್ಷಕ್ಕಿಳಿದು ಅವರದ್ದೇ ಸಮಾಜದ ವಿರೋಧಿಗಳಾಗುತ್ತಾರೆ! ಆದರೆ, ಅದೇ ಸಮಾಜದಲ್ಲಿ ಹುಟ್ಟಿದ ಸಕಾರಾತ್ಮಕ ಆಲೋಚನೆ ಹೊಂದಿದವರು ಅದೇ ಸಮಾಜದಲ್ಲಿ ಅನುಭವಿಸಿದ ಬಡತನ, ಕಷ್ಟ–ಸಂಕಟಗಳನ್ನು ನೋಡಿ ಅದರ ಲೋಪಗಳನ್ನು ಸರಿಪಡಿಸುವ ಆಲೋಚನೆಗಳನ್ನು ಮಾಡುತ್ತಾ ಅವರ ಸಮಾಜಕ್ಕಂಟಿದ ರೋಗಕ್ಕೆ ಚಿಕಿತ್ಸೆ ಹುಡುವುದರಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾ ಸಮಾಜಕ್ಕಾಗಿ ಸಮರ್ಪಿತರಾಗುತ್ತಾರೆ ಎಂಬುದಕ್ಕೆ ಡಾ.ಕೇಶವ ಬಲಿರಾಂ ಹೆಡಗೇವಾರರು ಮಾದರಿಯಾಗಿದ್ದಾರೆ.

**– ಡ್ಯಾನಿ ಪಿರೇರಾ,** ಹಳ್ಳಿಮೈಸೂರು

## ಎಲ್ಲೋ ಕೇಳಿದ ಕಥೆ

ಭಗವಾನ್ ರಮಣ ಮಹರ್ಷಿಯ ಬಳಿ ಕಣ್ಣಿಲ್ಲದ ಒಬ್ಬ ಕಡುಬಡವಿ ವೃದ್ಧೆ ಅಂಧ ಭಕ್ತೆ ಪ್ರತಿನಿತ್ಯವೂ ಬರುತ್ತಿದ್ದಳು. ಶ್ರೀ ರಮಣ ಮಹರ್ಷಿಯವರು ಗಿರಿ ಪ್ರದಕ್ಷಿಣೆ ಮಾಡಿ ಬರುವವರೆಗು ಅಲ್ಲಿಯೇ ನಿರೀಕ್ಷಿಸುತ್ತಾ ಕುಳಿತಿರುತ್ತಿದ್ದಳು.


ಒಂದು ಬಾರಿ ಭಗವಾನರು ತಮಾಷೆಯಿಂದ! ಆ ವೃದ್ಧೆಯ ಹತ್ತಿರ "ಅಜ್ಜಿ! ನೀನು ನನ್ನನ್ನು ನೋಡಲಾರೆ ಅಲ್ಲವೇ! ಆದರು, ಹೀಗೆ ಬೆಳಿಗ್ಗೆಯೇ ಕಷ್ಟ ಪಟ್ಟು ಬಂದು ನನ್ನ ಎದುರುಗಡೆ ಏಕೆ ಕುಳಿತುಕೊಳ್ಳುತ್ತೀಯಾ?" ಎಂದು ಪ್ರಶ್ನಿಸಿದರು. ಆಗ, ಆ ವೃದ್ಧೆ, ಅಮಿತವಾದ ಆರ್ದ್ರತೆಯಿಂದ "ಭಗವಾನ್! ನಾನು ನಿನ್ನನ್ನು ನೋಡಲು ಆಗದೆ ಇದ್ದರು, ನೀನು ನನ್ನನ್ನು ನೋಡುತ್ತೀಯಾ ಅಲ್ಲವೇ! ಅಷ್ಟು ಸಾಕು" ಎಂದಳು. ಆ ಮಾತುಗಳನ್ನು ಕೇಳಿದ ಕೂಡಲೇ ಮಹರ್ಷಿ ಕಣ್ಣು ತುಂಬಿ ಕೊಂಡವು. ನಾವು ಭಗವಂತನನ್ನು ನೋಡಲು ಆಗದೆ ಇದ್ದರು, ಭಗವಂತನು ನಮ್ಮನ್ನು ನೋಡುತ್ತಾನೆ ಅಲ್ಲವೇ.

**ಸಂಪಾದಕೀಯ ಸಹಕಾರ:** ಡ್ಯಾನಿ ಪಿರೇರಾ, ಶೈಲೇಶ್ ಕುಲಕರ್ಣಿ, ತನ್ಮಯೀ ಪ್ರೇಮಕುಮಾರ್, ಅರುಣ್ ಕಿರಿಮಂಜೇಶ್ವರ



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜಲ ಶಕ್ತಿ ಅಭಿಯಾನ – ಕ್ಯಾಚ್ ದಿ ರೈನ್ 2023 ಅಭಿಯಾನಕ್ಕೆ ನವದೆಹಲಿಯಲ್ಲಿ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಜಲಸಂರಕ್ಷಣೆ ಮತ್ತು ನಿರ್ವಹಣೆಯು ಭಾರತಕ್ಕೆ ಅತ್ಯಂತ ಪ್ರಮುಖ ವಿಷಯವಾಗಿದೆ. ದೇಶದಲ್ಲಿ ಕೇವಲ 4 ಪ್ರತಿಶತದಷ್ಟು ಜಲ ಸಂಪನ್ಮೂಲಗಳು ಲಭ್ಯವಿದೆ. ಯೋಜನೆಯಿಲ್ಲದ ನಗರೀಕರಣದಿಂದಾಗಿ ಸಾಂಪ್ರದಾಯಿಕ ಜಲಸಂರಕ್ಷಣಾ ವಿಧಾನಗಳು ದೇಶದಲ್ಲಿ ಕಣ್ಮರೆಯಾಗಿವೆ. ಇದರಿಂದಾಗಿ ಜಗತ್ತು ನೀರಿನ ಕೊರತೆ ಮತ್ತು ಜಾಗತಿಕ ತಾಪಮಾನದ ಸಮಸ್ಯೆಗಳನ್ನು ಎದುರಿಸುತ್ತಿದೆ ಎಂದರು.

ಭಾರತೀಯ ನ್ಯಾಯಾಂಗ ಶೀಘ್ರದಲ್ಲೇ ಕಾಗದ ರಹಿತವಾಗಲಿದೆ ಎಂದು ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ. ಒಡಿಶಾದ ಭುವನೇಶ್ವರದಲ್ಲಿ ಭಾರತದ ಪೂರ್ವ ರಾಜ್ಯಗಳ ಕೇಂದ್ರ ಸರ್ಕಾರದ ವಕೀಲರ 1 ನೇ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಸಚಿವರು, ನ್ಯಾಯ ವಿತರಣೆ ಯಾಂತ್ರಿಕ ವ್ಯವಸ್ಥೆಯನ್ನು ಡಿಜಿಟಲೀಕರಣಗೊಳಿಸುವ ಉದ್ದೇಶದಿಂದ ಇ–ಕೋರ್ಟ್ ಯೋಜನೆಯ ಹಂತ–III ಈಗಾಗಲೇ ಪ್ರಾರಂಭವಾಗಿದೆ ಎಂದು ಹೇಳಿದರು



ಕ್ವಾಡ್ ಸದಸ್ಯ ರಾಷ್ಟ್ರಗಳ ವಿದೇಶಾಂಗ ಮಂತ್ರಿಗಳು ಮುಕ್ತ ಇಂಡೋ–ಪೆಸಿಫಿಕ್ ಅನ್ನು ಬೆಂಬಲಿಸುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ. ವಿದೇಶಾಂಗ ಸಚಿವ ಎಸ್ ಜೈಶಂಕರ್ ನೇತೃತ್ವದಲ್ಲಿ ಕ್ವಾಡ್ ವಿದೇಶಾಂಗ ಸಚಿವರ ಸಭೆ ನವದೆಹಲಿಯಲ್ಲಿ ನಡೆಯಿತು. ಸಭೆಯ ಬಳಿಕ ಜಂಟಿ ಹೇಳಿಕೆ ನೀಡಿರುವ ನಾಯಕರು, ಸ್ವಾತಂತ್ರ್ಯ, ಕಾನೂನಿನ ನಿಯಮ, ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆ, ವಿವಾದಗಳ ಶಾಂತಿಯುತ ಇತ್ಯರ್ಥ ಮತ್ತು ಇಂಡೋ–ಪೆಸಿಫಿಕ್ ಪ್ರದೇಶದ ಸಮೃದ್ಧಿಯ ತತ್ವಗಳಿಗೆ ತಮ್ಮ ಬೆಂಬಲವನ್ನು ಪುನರುಚ್ಚರಿಸಿದರು.

ದೇಶದ ಪ್ರವಾಸೋದ್ಯಮ ಕ್ಷೇತ್ರಕ್ಕೆ ಹೊಸ ಉತ್ತುಂಗ ನೀಡಲು ವಿಸ್ತಾರ ಚಿಂತನೆ ಮತ್ತು ದೀರ್ಘಾವಧಿಯ ಯೋಜನೆಗಳ ಅಗತ್ಯವನ್ನು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ. ಭಾರತದ ಪ್ರವಾಸೋದ್ಯಮ ಸಾಮರ್ಥ್ಯವನ್ನು ಹೆಚ್ಚಿಸುವ ಕುರಿತು ಬಜೆಟ್ ನಂತರದ ವೆಬಿನಾರ್ ಅನ್ನು ಉದ್ದೇಶಿಸಿ ಮಾತನಾಡಿದ ಮೋದಿ, ಭಾರತದಲ್ಲಿ ಪ್ರವಾಸೋದ್ಯಮದ ಬೃಹತ್ತಾದ ವ್ಯಾಪ್ತಿ ಹೊಂದಿದೆ ಮತ್ತು ಈ ದಿಕ್ಕಿನಲ್ಲಿ ಕರಾವಳಿ, ಬೀಚ್, ಮ್ಯಾಂಗ್ರೋವ್, ಹಿಮಾಲಯ, ಸಾಹಸ, ವನ್ಯಜೀವಿ, ಪರಿಸರ, ಪರಂಪರೆ, ಆಧ್ಯಾತ್ಮಿಕ, ವಿವಾಹ ಸ್ಥಳಗಳು ಮತ್ತು ಕ್ರೀಡಾ ಪ್ರವಾಸೋದ್ಯಮ ಮಹತ್ವದ್ದಾಗಿದೆ ಎಂದಿದ್ದಾರೆ.

ಆಂಧ್ರಪ್ರದೇಶದ ಎಲ್ಲಾ 26 ಜಿಲ್ಲೆಗಳು ಕನಿಷ್ಠ ಒಂದು ಹಿಂದೂ ದೇವಾಲಯವನ್ನು ಹೊಂದಿರುವುದನ್ನು ಖಚಿತಪಡಿಸಲು ಸರ್ಕಾರ ಪ್ರಯತ್ನಗಳನ್ನು ಆರಂಭಿಸಿದೆ. ಆಡಳಿತದ ಪ್ರಕಾರ, ರಾಜ್ಯದ ಪ್ರತಿ ಹಳ್ಳಿಯಲ್ಲಿ ದೇವಾಲಯಗಳನ್ನು ನಿರ್ಮಿಸಲು ಅಲ್ಲಿನ ಸರ್ಕಾರ ಮುಂದಾಗಿದೆ. ಉಪಮುಖ್ಯಮಂತ್ರಿ ಕೊಟ್ಟು ಸತ್ಯನಾರಾಯಣ ಅವರ ಪ್ರಕಾರ, ಮುಖ್ಯಮಂತ್ರಿ ವೈಎಸ್ ಜಗನ್ ಮೋಹನ್ ರೆಡ್ಡಿ ಅವರ ಆದೇಶದ ಮೇರೆಗೆ ರಾಜ್ಯಾದ್ಯಂತ 'ಹಿಂದೂ ನಂಬಿಕೆಯನ್ನು ರಕ್ಷಿಸುವ ಮತ್ತು ಹರಡುವ' ಪ್ರಯತ್ನವನ್ನು ಪ್ರಾರಂಭಿಸಲಾಗಿದೆ ಮತ್ತು ಮುಂಬರುವ ವರ್ಷಗಳಲ್ಲಿ ರಾಜ್ಯವು 3000 ದೇವಾಲಯಗಳನ್ನು ನಿರ್ಮಿಸಲಿದೆ ಎಂದಿದ್ದಾರೆ.



6,828.36 ಕೋಟಿ ರೂಪಾಯಿ ವೆಚ್ಚದಲ್ಲಿ ಭಾರತೀಯ ವಾಯುಪಡೆಗಾಗಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ನಿಂದ 70 HTT–40 ಬೇಸಿಕ್ ಟ್ರೈನರ್ ಏರ್‌ಕ್ರಾಫ್ಟ್‌ಗಳನ್ನು ಖರೀದಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಆರು ವರ್ಷಗಳ ಅವಧಿಯಲ್ಲಿ ವಿಮಾನಗಳನ್ನು ಪೂರೈಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ವಿಶ್ವ ಅಲ್ಟ್ರಾಸೈಕ್ಲಿಂಗ್ ಅಸೋಸಿಯೇಷನ್ನಿಂದ ಏಷ್ಯನ್ ಅಲ್ಟ್ರಾಸೈಕ್ಲಿಂಗ್ ಚಾಂಪಿಯನ್ಶಿಪ್ ಸ್ಥಾನಮಾನ ಪಡೆದ ಏಷ್ಯಾದ ಅತ್ಯಂತ ಸುದೀರ್ಘ ಸೈಕಲ್ ರೇಸ್ಗೆ ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಿಂದ ಚಾಲನೆ ನೀಡಲಾಯಿತು. ಈ ಸೈಕಲ್ ರೇಸ್ ಮೂರು ಸಾವಿರ ಕಿಲೋಮೀಟರ್‌ಗಿಂತಲೂ ಹೆಚ್ಚು ದೂರ ಕ್ರಮಿಸಿದ ನಂತರ ಕನ್ಯಾಕುಮಾರಿಯಲ್ಲಿ ಮುಕ್ತಾಯಗೊಳ್ಳಲಿದೆ. ರೇಸ್ಗೆ ಕಾಶ್ಮೀರ ವಿಭಾಗೀಯ ಆಯುಕ್ತ ವಿಜಯ್ ಕುಮಾರ್ ಬಿಧುರಿ ಅವರು ಶ್ರೀನಗರದಲ್ಲಿ ಚಾಲನೆ ನೀಡಿದರು. ಒಬ್ಬ ಮಹಿಳೆ ಸೇರಿದಂತೆ 29 ಸೈಕ್ಲಿಸ್ಟ್‌ಗಳು 3651–ಕಿಲೋಮೀಟರ್ ಸೈಕಲ್ ರೇಸ್ನಲ್ಲಿ ಭಾಗಿಯಾಗಿದ್ದಾರೆ.

# ಸಾಲುದ್ದದ ಸುದ್ದಿಗಳು



ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ರಾಜ್ಯ ಸರ್ಕಾರಿ ನೌಕರರ ವೇತನವನ್ನು ಶೇ.17ರಷ್ಟು ಹೆಚ್ಚಳ ಮಾಡಿ ಆದೇಶ ಹೊರಡಿಸಿದೆ. 2023ರ ಏಪ್ರಿಲ್ 1ರಿಂದ ನೂತನ ಆದೇಶ ಜಾರಿಯಾಗಲಿದೆ ಎಂದು ಮೂಲಗಳು ತಿಳಿಸಿವೆ. ಸರ್ಕಾರಿ ನೌಕರರ ಮುಷ್ಕರ ಹಿನ್ನೆಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರದ ನಿರ್ಧಾರವನ್ನು ತಿಳಿಸಿದ್ದಾರೆ.



ಮುಂಬೈ ನಂತರ ಬೆಂಗಳೂರು ಶೀಘ್ರದಲ್ಲೇ ಡಬಲ್ ಡೆಕ್ಕರ್ ಬಸ್ಗಳನ್ನು ಪಡೆಯಲಿದೆ. ಮೊದಲ ಎಸಿ ಡಬಲ್ ಡೆಕ್ಕರ್ ಎಲೆಕ್ಟ್ರಿಕ್ ಬಸ್ ಮಾರ್ಚ್ ತಿಂಗಳಲ್ಲಿ ಕಾರ್ಯನಿರ್ವಹಿಸುವ ಸಾಧ್ಯತೆಯಿದೆ ಎಂದು ವರದಿಗಳು ತಿಳಿಸಿವೆ. ನಗರ ಭೂ ಸಾರಿಗೆ (DULT) ನಿರ್ದೇಶನಾಲಯದ ಅಡಿಯಲ್ಲಿ ಐದು ಡಬಲ್ ಡೆಕ್ಕರ್ AC ಎಲೆಕ್ಟ್ರಿಕ್ ಬಸ್ಗಳಿಗೆ ರೂ 10 ಕೋಟಿ ಟೆಂಡರ್ ಅನ್ನು ನೀಡಲಾಗಿದ್ದು, ಸ್ವಿಚ್ ಮೊಬಿಲಿಟಿ ಏಕೈಕ ಬಿಡ್ಡರ್ ಆಗಿ ಹೊರಹೊಮ್ಮಿತ್ತು.

ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಜಸ್ಥಾನದ ಬಿಕನೇರ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸಂಸ್ಕೃತಿ ಮಹೋತ್ಸವದ 14 ನೇ ಆವೃತ್ತಿಯನ್ನು ಔಪಚಾರಿಕವಾಗಿ ಉದ್ಘಾಟಿಸಿದರು. ಡಾ. ಕರ್ಣಿ ಸಿಂಗ್ ಸ್ಟೇಡಿಯಂನಲ್ಲಿ ಮಹೋತ್ಸವ ಆಯೋಜಿಸಲಾಗಿತ್ತು. ರಾಜಸ್ಥಾನದಲ್ಲಿ ಮೊದಲ ಬಾರಿಗೆ 9 ದಿನಗಳ ಕಾಲ ನಡೆದ ಉತ್ಸವ, ಮಾರ್ಚ್ 5ಕ್ಕೆ ಮುಕ್ತಾಯವಾಯಿತು.



ಭಾರತೀಯ ವಾಯುಸೇನೆಯ 145 ವಾಯು ವೀರರನ್ನು ಒಳಗೊಂಡ ತುಕಡಿಯು ಜಾಮ್ ನಗರ ವಾಯುನೆಲೆಯಿಂದ ಯುಕೆಯ ರಾಯಲ್ ಏರ್ ಫೋರ್ಸ್ನ ವಾಡಿಂಗ್ಟನ್ ಏರ್ ಫೋರ್ಸ್ ಬೇಸ್ಗೆ ಪ್ರಯಾಣ ಆರಂಭಿಸಿದೆ. ಈ ವಾಯುಸೇನಾ ತುಕಡಿಯು ಅಲ್ಲಿ ಕೋಬ್ರಾ ವಾರಿಯರ್ ವ್ಯಾಯಾಮದಲ್ಲಿ ಭಾಗವಹಿಸಲಿದೆ. 'ಎಕ್ಸರ್ಸೈಸ್ ಕೋಬ್ರಾ ವಾರಿಯರ್' ಬಹುಪಕ್ಷೀಯ ವಾಯು ವ್ಯಾಯಾಮವಾಗಿದ್ದು, ಇದರಲ್ಲಿ ಫಿನ್ಲ್ಯಾಂಡ್, ಸ್ವೀಡನ್, ದಕ್ಷಿಣ ಆಫ್ರಿಕಾ, ಅಮೆರಿಕಾ ಮತ್ತು ಸಿಂಗಾಪುರದ ವಾಯುಪಡೆಗಳು ಸಹ ಭಾಗವಹಿಸುತ್ತಿವೆ' ಎಂದು ಮೂಲಗಳು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ಅವರು ಶಿವಮೊಗ್ಗದ ಸೋಗಾನೆಯಲ್ಲಿ ನಿರ್ಮಾಣವಾಗಿರುವ ನೂತನ ವಿಮಾನನಿಲ್ದಾಣವನ್ನು ಲೋಕಾರ್ಪಣೆಗೊಳಿಸಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, "ಶಿವಮೊಗ್ಗಕ್ಕೆ ತನ್ನದೇ ಆದ ವಿಮಾನನಿಲ್ದಾಣ ದೊರೆತಿದೆ. ಈ ಮೂಲಕ ದೀರ್ಘಕಾಲದ ಬೇಡಿಕೆಯೊಂದು ಈಡೇರಿದೆ. ಈ ವಿಮಾನನಿಲ್ದಾಣ ಕರ್ನಾಟಕದ ಪರಂಪರೆ ಮತ್ತು ತಾಂತ್ರಿಕತೆಯ ಅದ್ಭುತ ಸಂಗಮವಾಗಿದೆ. ಇದು ಕೇವಲ ವಿಮಾನನಿಲ್ದಾಣವಲ್ಲ, ಈ ಪ್ರದೇಶದ ಯುವಜನತೆಯ ಕನಸುಗಳಿಗೆ ಹೊಸ ರೆಕ್ಕೆ ನೀಡಿದ ಅಭಿಯಾನ" ಎಂದರು.

ಕಳೆದ ವರ್ಷ ಜೂನ್ನಲ್ಲಿ ಅನಾವರಣಗೊಂಡ ಅಗ್ನಿಪಥ್ ಯೋಜನೆಯು ಸಶಸ್ತ್ರ ಪಡೆಗಳಲ್ಲಿ ಯುವಕರ ನೇಮಕಾತಿಗೆ ನಿಯಮಗಳನ್ನು ರೂಪಿಸುತ್ತದೆ. ಈ 'ಅಗ್ನಿಪಥ್' ಯೋಜನೆಯನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳನ್ನು ದೆಹಲಿ ಹೈಕೋರ್ಟ್ ವಜಾ ಮಾಡಿದ್ದು, ಯೋಜನೆಯು ರಾಷ್ಟ್ರೀಯ ಹಿತಾಸಕ್ತಿಯನ್ನು ಹೊಂದಿದೆ ಮತ್ತು ಸಶಸ್ತ್ರ ಪಡೆಗಳನ್ನು ಸುಸಜ್ಜಿತಗೊಳಿಸುವ ಉದ್ದೇಶದೊಂದಿಗೆ ಇದನ್ನು ರೂಪಿಸಲಾಗಿದೆ ಎಂದು ಹೇಳಿದೆ.

ಮುಂದಿನ ಐದು ವರ್ಷಗಳಲ್ಲಿ ಭಾರತವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಮತ್ತು 2047ರ ವೇಳೆಗೆ ಭಾರತವು ಪ್ರಸ್ತುತ ಅಮೆರಿಕಾ ಇರುವ ಆರ್ಥಿಕ ಮಟ್ಟದಲ್ಲಿರಬಹುದು ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ಅವರು ಇತ್ತೀಚೆಗೆ ಪುಣೆಯಲ್ಲಿ ನಡೆದ ಏಷ್ಯಾ ಆರ್ಥಿಕ ಸಂವಾದ 2023 ಕಾರ್ಯಕ್ರಮದಲ್ಲಿ ಈ ಭರವಸೆಯನ್ನು ವ್ಯಕ್ತಪಡಿಸಿದ್ದಾರೆ

ಸಿಕಂದರಾಬಾದ್ನಲ್ಲಿರುವ ಝೋನಲ್ ರೈಲ್ವೇ ಟ್ರೈನಿಂಗ್ ಇನ್ಸ್ಟಿಟ್ಯೂಟ್ ತನ್ನ ಆವರಣದಲ್ಲಿರುವ 200 ವರ್ಷಗಳ ಹಳೆಯ ಪಾರಂಪರಿಕ ಬಾವಿಯನ್ನು ನವೀಕರಿಸುತ್ತಿದೆ. ಸಂಸ್ಥೆಯು ನೀರಿನ ಸಂರಕ್ಷಣೆಗೆ ಅನುಕೂಲವಾಗುವಂತೆ ಬಾವಿಯ ಸುತ್ತಲೂ ಮಳೆನೀರು ಕೊಯ್ಲು ಹೊಂಡವನ್ನು ನಿರ್ಮಿಸಿದೆ. ಸಿಕಂದರಾಬಾದ್ ಝೋನಲ್ ರೈಲ್ವೇ ಟ್ರೈನಿಂಗ್ ಇನ್ಸ್ಟಿಟ್ಯೂಟ್ (ಎಸ್ಸಿಆರ್) ಸುಮಾರು 6 ಲಕ್ಷ ರೂಪಾಯಿ ವೆಚ್ಚದಲ್ಲಿ ಪಾರಂಪರಿಕ ಬಾವಿಯ ನವೀಕರಣವನ್ನು ಕೈಗೆತ್ತಿಕೊಂಡಿದೆ. ನವೀಕರಿಸಿದ ಬಾವಿಯು ತಿಂಗಳಿಗೆ ಸುಮಾರು 5 ಲಕ್ಷ ರೂಪಾಯಿಗಳಷ್ಟು ಉಳಿತಾಯವನ್ನು ಮಾಡುವ ನಿರೀಕ್ಷೆಯಿದೆ ಎಂದು ಹೇಳಲಾಗಿದೆ. ಅಲ್ಲದೇ ಇದು ಐದು ದಶಕಗಳಿಂದ ರೈಲ್ವೇ ತರಬೇತಿ ಸಂಸ್ಥೆಯ ನೀರಿನ ಅವಶ್ಯಕತೆಗಳನ್ನು ಪೂರೈಸುತ್ತಿದೆ.



ಪ್ರಧಾನಿ ನರೇಂದ್ರ ಮೋದಿಯವರು ದೆಹಲಿಯ ತಾಲ್ಕಟೋರ ಸ್ಟೇಡಿಯಂನಲ್ಲಿ ದೆಹಲಿ ಕರ್ನಾಟ ಸಂಘ ಆಯೋಜಿಸಿರುವ ಎರಡು ದಿನಗಳ "ಬಾರಿಸು ಕನ್ನಡ ಡಿಂಡಿಮವ" ಸಾಂಸ್ಕೃತಿಕ ಉತ್ಸವವನ್ನು ಡೋಲು ಬಾರಿಸುವ ಮೂಲಕ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು "ರಾಷ್ಟ್ರ ನಿರ್ಮಾಣದಲ್ಲಿ ಕರ್ನಾಟಕ ಜನರ ಕೊಡುಗೆ ಸಾಕಷ್ಟಿದೆ. ರಾಷ್ಟ್ರಕವಿ ಕುವೆಂಪು ಅವರು ರಚಿಸಿದ ಅದ್ಭುತವಾದ ನಾಡಗೀತೆಯಲ್ಲಿ ಭಾರತದ ಸಭ್ಯತೆಯ ಉಲ್ಲೇಖವಿದೆ. ಇಡೀ ಭಾರತ ಹಾಗೂ ಕರ್ನಾಟಕದ ವಿವರಣೆಯನ್ನು ಒಳಗೊಂಡಿದೆ. ಏಕ್ ಭಾರತ್ ಶ್ರೇಷ್ಠ ಭಾರತ್ ಸಂದೇಶವನ್ನು ಸಾರುತ್ತದೆ" ಎಂದಿದ್ದಾರೆ

ಮಹಾರಾಷ್ಟ್ರದ ಎರಡು ಪ್ರಮುಖ ನಗರಗಳಾದ ಔರಂಗಾಬಾದ್ ಮತ್ತು ಒಸ್ಮಾನಾಬಾದ್ ಮರುನಾಮಕರಣಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಔರಂಗಾಬಾದ್ ಅನ್ನು 'ಛತ್ರಪತಿ ಸಂಭಾಜಿನಗರ' ಎಂದು ಮರುನಾಮಕರಣ ಮಾಡಲಾಗುತ್ತಿದೆ ಮತ್ತು ಒಸ್ಮಾನಾಬಾದ್ ಅನ್ನು 'ಧಾರಶಿವ್' ಎಂದು ಮರುನಾಮಕರಣ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ದೇಶದಲ್ಲಿ ಎಲೆಕ್ಟ್ರಾನಿಕ್ ಚಿಪ್ ಉತ್ಪಾದನಾ ಘಟಕಗಳನ್ನು ನಿರ್ಮಿಸಲು ಈ ವರ್ಷ ಎರಡು ಅರ್ಜಿಗಳನ್ನು ಅನುಮೋದಿಸಲು ಸರ್ಕಾರ ಮುಂದಾಗಿದೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಐಟಿ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಮಾಹಿತಿ ನೀಡಿದ್ದಾರೆ. ಸೆಮಿಕಾನ್‌ಇಂಡಿಯಾ ಫ್ಯೂಚರ್ ಡಿಸೈನ್ ಕಾನ್ಫರೆನ್ಸ್‌ನಲ್ಲಿ ಮಾತನಾಡಿದ ಸಚಿವರು, ಎಲೆಕ್ಟ್ರಾನಿಕ್ ಚಿಪ್ ವ್ಯವಹಾರದಲ್ಲಿನ ಮಂದಗತಿಯ ಪ್ರಸ್ತುತ ಪರಿಸ್ಥಿತಿಯು ಭಾರತದ ಸೆಮಿಕಂಡಕ್ಟರ್ ಕಾರ್ಯಕ್ರಮದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ, ಏಕೆಂದರೆ ಪರಿಣಾಮವು ಏರುಗತಿ ಸ್ವರೂಪದ್ದಾಗಿದೆ ಮತ್ತು ದೀರ್ಘಾವಧಿಯ ದೃಷ್ಟಿಯನ್ನು ಹೊಂದಿದೆ ಎಂದು ಹೇಳಿದರು.

2047 ರ ವೇಳೆಗೆ ತಾಂತ್ರಿಕ ಜವಳಿ ಉದ್ಯಮವು 125 ಶತಕೋಟಿ ಡಾಲರ್ ಉದ್ಯಮವಾಗಲಿದೆ ಎಂದು ಕೇಂದ್ರ ಜವಳಿ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ಅವರು ಮುಂಬೈನ ಗೋರೆಗಾಂವ್ನಲ್ಲಿರುವ ಬಾಂಬೆ ಎಕ್ಸಿಬಿಷನ್ ಸೆಂಟರ್‌ನಲ್ಲಿ "ಟೆಕ್ನೋಟೆಕ್ಸ್ 2023: ಎನ್ವಿಷನಿಂಗ್ ಇಂಡಿಯನ್ ಟೆಕ್ನಿಕಲ್ ಟೆಕ್ಸ್ಟೈಲ್ಸ್ @2047" ಎಂಬ ತಾಂತ್ರಿಕ ಜವಳಿಗಳ ಕುರಿತಾದ ಅಂತರರಾಷ್ಟ್ರೀಯ ಪ್ರದರ್ಶನ ಮತ್ತು ಸಮ್ಮೇಳನದ 10 ನೇ ಆವೃತ್ತಿಯ ಪ್ರಮುಖ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು.

ಭಾರತೀಯ ಕೃಷಿ ಸಂಶೋಧನಾ ಮಂಡಳಿ (ICAR) ಹೊಸ ಗೋಧಿ ತಳಿಯನ್ನು ಅಭಿವೃದ್ಧಿಪಡಿಸಿದೆ. ಇದು ಹವಾಮಾನದ ಬದಲಾವಣೆಗಳು ಮತ್ತು ಹೆಚ್ಚುತ್ತಿರುವ ತಾಪಮಾನದಿಂದ ಉಂಟಾಗುವ ಸವಾಲುಗಳನ್ನು ಎದುರಿಸಿ ಬೆಳೆಯಬಲ್ಲ ಗೋಧಿ ತಳಿಯಾಗಿದೆ. HD–3385 ಎಂದು ಕರೆಯಲ್ಪಡುವ ಈ ಹೊಸ ಗೋಧಿ ವಿಧವು ಆರಂಭಿಕ ಬಿತ್ತನೆಗೆ ಸೂಕ್ತವಾಗಿದೆ, ಶಾಖದ ಪ್ರಭಾವದಿಂದ ಇದು ಪಾರಾಗುವ ಸಾಮರ್ಥ್ಯ ಹೊಂದಿದೆ ಮತ್ತು ಮಾರ್ಚ್ ಅಂತ್ಯದ ಮೊದಲು ಇದನ್ನು ಕೊಯ್ಲು ಮಾಡಬಹುದು.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th MARCH 2023
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 15-03-2023



# ನಿಶ್ಕಲ್ಮಶ ಚರಿತೆಯ ಅರಿವು ಇರುವಲ್ಲಿ ವಿಶ್ವಶಾಂತಿ ನೆಲೆಸಲೇಬೇಕು: ಕಜಂಪಾಡಿ ಸುಬ್ರಹ್ಮಣ್ಯ ಭಟ್

ಭಾರತೀಯ ಜೀವನ ಪದ್ಧತಿಯಲ್ಲಿ ನಕಾರಾತ್ಮಕ ಸಂಗತಿಗಳಿಗೆ ಅವಕಾಶವಿಲ್ಲ. ಶತ್ರುಗಳೆನಿಸಿಕೊಂಡವರಿಗೆ ಕೇಡನ್ನೇ ಬಯಸುವ ನಿದರ್ಶನಗಳು ನಮ್ಮೆದುರಿಗೆ ಇರುವಾಗ ಶತ್ರು ಬುದ್ಧಿಯನ್ನು ವಿನಾಶ ಮಾಡು ಎಂದು ಪ್ರಾರ್ಥಿಸುವುದು ಹಿಂದೂಗಳು ಮಾತ್ರ. ಪ್ರತಿ ಜೀವಿಯ ಸುಖವನ್ನು ಬಯಸುವ ಸಾಮಾಜಿಕ ಕೌಟುಂಬಿಕ ಮತ್ತು ವೈಯಕ್ತಿಕ ಮೌಲ್ಯಗಳನ್ನು ರೂಢಿಯಿಂದ ಬೆಳೆಸಿಕೊಂಡು ಬಂದಿರುವ ಧರ್ಮ ನಮ್ಮದು. ಅವುಗಳ ಅನುಷ್ಠಾನ ಮನಸ್ಸುಗಳನ್ನು ಒಂದಾಗಿಸುವ ಮನೆಗಳಿಂದಲೇ ಆಗಬೇಕೆಂದು ಜ್ಞಾನಭಾರತಿ ಪ್ರಕಾಶನ ಲಿಮಿಟೆಡ್‌ನ ಅಧ್ಯಕ್ಷ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಹೇಳಿದರು.

ವಿಕ್ರಮ ವಾರಪತ್ರಿಕೆಯ ವತಿಯಿಂದ ಬಸವನಗುಡಿಯ ಬಿಎಂಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಯೋಜಿಸಲಾದ 'ವಿಶ್ವಶಾಂತಿಗಾಗಿ ಹಿಂದುತ್ವ' ಎಂಬ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಮಗೆ ಮುಪ್ಪಿಲ್ಲ ಎನ್ನುವಂತೆ ಧರ್ಮ ಮಾರ್ಗದಲ್ಲಿ ವಿದ್ಯೆ ಮತ್ತು ಹಣವನ್ನು ಗಳಿಸಬೇಕು. ವೈಯಕ್ತಿಕ ಕೆಲಸ ಸಮಾಜ ಕಟ್ಟುವ ಕೆಲಸಕ್ಕೂ ಪೂರಕವಾಗಿರಬೇಕು. ಅಂದುಕೊಂಡ ಕಾರ್ಯದ ಅನುಷ್ಠಾನದ ಸಂದರ್ಭ ಅಭಿಪ್ರಾಯ ಭೇದಗಳಿರುವುದು ತಪ್ಪಲ್ಲ. ಆದರೆ ಮನಃಭೇದವಿದ್ದರೆ ಅದು ಶಾಂತಿಯನ್ನು ಕದಡಿಸುತ್ತದೆ. ಅಂತಹ ಸಂದರ್ಭಗಳಲ್ಲಿ ಸಮಾಜಕ್ಕೆ ದೃಷ್ಟಿಯನ್ನು ನೀಡುವ ಸಲುವಾಗಿ ವಿಕ್ರಮದಂತಹ ಪ್ರಯತ್ನಗಳು ಮುನ್ನೆಲೆಗೆ ಬರಬೇಕು ಎಂದು ಅಭಿಪ್ರಾಯಪಟ್ಟರು. ಒಂದು ಕೆನ್ನೆಗೆ ಹೊಡೆದರೆ,



ಇನ್ನೊಂದು ಕೆನ್ನೆಯನ್ನು ತೋರಿಸಬೇಕೆನ್ನುವ ಶಾಂತಿಯ ಕಲ್ಪನೆ ನಮ್ಮದಲ್ಲ. ಇನ್ನೊಂದು ಕೆನ್ನೆಯನ್ನು ತೋರಿಸುವ ವಿಧಾನದಲ್ಲೇ ಎದುರಿಗಿರುವವನನ್ನು ಅಧೈರ್ಯಗೊಳಿಸುವ ಮತ್ತು ಶಕ್ತಿಯಿದ್ದರೂ ಶಾಂತಿಯನ್ನು ಪಾಲಿಸುವ ಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕೆನ್ನುವ ಅಹಿಂಸೆಯ ಕಲ್ಪನೆ ನಮ್ಮದು ಎಂದು ನುಡಿದರು.

ಕಾರ್ಯಕ್ರಮದ ಇನ್ನೋರ್ವ ಮುಖ್ಯ ಅತಿಥಿ, ಚಿಂತಕ ಹಾಗೂ ಲೇಖಕ ಜಿ.ಬಿ. ಹರೀಶ್ ಮಾತನಾಡಿ ಸತ್ಯ ಎನ್ನುವುದು ಬಹಳ ಸರಳವೇ ಆಗಿರುತ್ತದೆ, ಆದರೆ ನಾವು ಅದನ್ನು ಸಂಕೀರ್ಣಗೊಳಿಸಿದ್ದೇವೆ. ಸಂಕೀರ್ಣತೆಯೊಳಗೆ ಅಡಗಿರುವ ಸತ್ಯವೆಂಬ ಬೆಳಕಿನ ಅನ್ವೇಷಣೆಯೇ ಹಿಂದುತ್ವವಾಗಿದೆ. ಅದರ ರೂಪಗಳು ಹಲವು ಕ್ಷೇತ್ರಗಳಲ್ಲಿ ವ್ಯಾಪಿಸಿರಬಹುದು. ಆದರೆ ಗುರಿ ಮನುಷ್ಯಕೋಟಿಯನ್ನು ದೇವತಾಕೋಟಿಯನ್ನಾಗಿಸುವುದೇ ಆಗಿದೆ ಎಂದರು.

ಉತ್ಸವ ಮೂರ್ತಿಗೆ ಮೂಲ ವಿಗ್ರಹ ಶಕ್ತಿಯ ಕೇಂದ್ರವಾಗಿರುವಂತೆ, ಹಿಂದುತ್ವದ ಸತ್ವ ಅಡಗಿರುವ ಎಲ್ಲಾ ಕ್ಷೇತ್ರಗಳಿಗೂ ಶಕ್ತಿಯ ಕೇಂದ್ರ ನಮ್ಮ ಸನಾತನ ಸಂಸ್ಕೃತಿ. ಈ ಸಂಸ್ಕೃತಿ ಪ್ರಶ್ನಾತೀತವಾಗಿರದೆ ಸಂವಾದದ ಮೂಲಕವೇ ಬೆಳೆದುಬಂದಿದೆ. ಆದರೆ ಪ್ರಶ್ನೆಗೆ ಅವಕಾಶ ಇರುವ ದೇಶದಲ್ಲಿ, ಪ್ರಶ್ನೆಗಳನ್ನು ಮುಚ್ಚಿಹಾಕುವ ಪ್ರಯತ್ನಗಳಾದರೆ ವಿಶ್ವಶಾಂತಿಯನ್ನು ಗಳಿಸಲು ಸಾಧ್ಯವಿಲ್ಲ. ಪ್ರಶ್ನಿಸುವ ಮೂಲಕ ಅನಾವರಣಗೊಳ್ಳುವ ಸತ್ಯದ ಪ್ರಖರತೆಗೆ ನಮ್ಮದಲ್ಲದ, ಮೂಲಕ್ಕೆ ಅಪಾಯಕಾರಿಗಳಾದ ವ್ಯವಸ್ಥೆಗಳೆಲ್ಲವೂ ಅಸ್ತಿತ್ವ ಕಳೆದುಕೊಳ್ಳಲೇಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳ ಉಪನ್ಯಾಸದ ನಂತರ ಸಂವಾದ ಕಾರ್ಯಕ್ರಮವನ್ನು ವಿಕ್ರಮ ವಾರಪತ್ರಿಕೆ ಮತ್ತು ಸಂವಾದ ಯೂಟ್ಯೂಬ್ ವಾಹಿನಿಯ ಸಂಪಾದಕ ವೃಷಾಂಕ್ ಭಟ್ ನಡೆಸಿಕೊಟ್ಟರು. ನಂತರ 'ವಿಶ್ವಶಾಂತಿಗಾಗಿ ಹಿಂದುತ್ವ' ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಚಿತ್ರದುರ್ಗದ ಪನ್ನಗ ಪಿ. ರಾಯ್ಕರ್ ಪ್ರಥಮ ಬಹುಮಾನ, ಬೆಂಗಳೂರಿನ ಪ್ರಣವ ಗೋಗಟೆ ದ್ವಿತೀಯ ಬಹುಮಾನ, ದಕ್ಷಿಣ ಕನ್ನಡ ಜಿಲ್ಲೆಯ ಶ್ರೀದೇವಿ ತೃತೀಯ ಬಹುಮಾನ ಸ್ವೀಕರಿಸಿದರು. 20 ಮಂದಿ ವಿದ್ಯಾರ್ಥಿಗಳು ಸಮಾಧಾನಕರ ಬಹುಮಾನವನ್ನು ಪಡೆದುಕೊಂಡರು. ರಾಜ್ಯದ 31 ಜಿಲ್ಲೆಯ 690 ವಿದ್ಯಾರ್ಥಿಗಳು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದರು.

# 'ಸುಂದರ ಮಲೆನಾಡಿನ ಧೀಮಂತ ಅರಸರು' ಕಾಫಿ ಟೇಬಲ್ ಕೃತಿ ಲೋಕಾರ್ಪಣೆ ಕಾರ್ಯಕ್ರಮ

ವಿಕ್ರಮ ವಾರಪತ್ರಿಕೆ ಆಯೋಜಿಸಿದ್ದ 'ಸುಂದರ ಮಲೆನಾಡಿನ ಧೀಮಂತ ಅರಸರು' ಕಾಫಿ ಟೇಬಲ್ ಕೃತಿಯ ಲೋಕಾರ್ಪಣೆ ಹಾಗೂ ಮಲೆನಾಡಿನ ಅರಸುಮನೆತನಗಳ ಕುರಿತು ವಿಚಾರ ಸಂಕಿರಣ ಶಿವಮೊಗ್ಗದ ಕರ್ನಾಟಕ ಸಂಘದ ಸಭಾಭವನದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಹಿರಿಯ ಸಂಶೋಧಕ ಡಾ. ಕೆಳದಿ ಗುಂಡಾ ಜೋಯಿಸ್ ಮಾತನಾಡಿ, ಕೆಳದಿ ಇತಿಹಾಸವನ್ನು ವಿದೇಶಿ ವಿದ್ವಾಂಸರು ಹೆಚ್ಚಿನ ಸಂಖ್ಯೆಯಲ್ಲಿ ಅಧ್ಯಯನ ಮಾಡಿದ್ದಾರೆ. ಆದರೆ ನಮ್ಮವರಿಂದಲೇ ಸಾಕಷ್ಟು ಅಧ್ಯಯನ ಆಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ವಿಚಾರ ಸಂಕಿರಣದ ಸರ್ವಾಧ್ಯಕ್ಷತೆ ವಹಿಸಿದ್ದ ಹಂಪಿ ಕನ್ನಡ ವಿವಿಯ ಶಾಸನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಅಮರೇಶ್ ಯತಗಲ್ ಮಾತನಾಡಿ, ಮಲೆನಾಡು ಭೌತಿಕ, ಸಾಂಸ್ಕೃತಿಕ, ಚಾರಿತ್ರಿಕವಾಗಿ ಅತ್ಯಂತ ಸುಂದರವಾಗಿದೆ. ದೊಡ್ಡ ರಾಜರು ದೀಪವಾದರೆ, ದೀಪಕ್ಕೆ ಎಣ್ಣೆ – ಬತ್ತಿ ಸಾಮಂತರಸರು ಎಂದರು. ಹಿರಿಯ ಸಾಹಿತಿ ನಾ. ಡಿಸೋಜಾ, ಇತಿಹಾಸಕಾರ ಲಕ್ಷ್ಮೀಶ್ ಹೆಗಡೆ ಸೋಂದಾ ಉಪಸ್ಥಿತರಿದ್ದರು. ವಿಕ್ರಮದ ವ್ಯವಸ್ಥಾಪಕ ಸಂಪಾದಕ ಸು. ನಾಗರಾಜ್ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ವಿಚಾರ ಸಂಕಿರಣದ ಮೊದಲ ಗೋಷ್ಠಿಯಲ್ಲಿ ಹಿರಿಯ ಇತಿಹಾಸ ಸಂಶೋಧಕ ಡಾ. ಎಸ್. ಜಿ. ಸಾಮಕ್ ಅಧ್ಯಕ್ಷತೆ ವಹಿಸಿ ಕೆಳದಿ ಸಂಸ್ಥಾನದ ವಿಶೇಷತೆಗಳನ್ನು ಹಂಚಿಕೊಂಡರು. ನೇಪಾಳದಲ್ಲಿ ಇಂದಿಗೂ ಪಶುಪತಿ ದೇವಸ್ಥಾನದಲ್ಲಿ ಕನ್ನಡಿಗರೇ ಪೂಜೆ ಮಾಡುತ್ತಿರುವುದು ಕೆಳದಿ ಸಂಸ್ಥಾನದ ಕೊಡುಗೆ ಎಂದರು. ಇತಿಹಾಸಕಾರ ಡಾ. ಲಕ್ಷ್ಮೀಶ್ ಹೆಗಡೆ ಸೋಂದಾ, ಬ್ರಿಟಿಷರ ವಿರುದ್ಧ ಮೊದಲು ಹೋರಾಟ ಮಾಡಿ ಜಯಗಳಿಸಿದ್ದು ಸೋದೆಯ ಅರಸ ಇಮ್ಮಡಿ ಸದಾಶಿವರಾಯ. 1680ರಲ್ಲಿ ಬ್ರಿಟಿಷರು ಕಾರವಾರವನ್ನು ಆಕ್ರಮಿಸಿದ್ದರು. ಅವರನ್ನು ಸಂಪೂರ್ಣವಾಗಿ ಸೋಲಿಸಿ ಓಡಿಸಿದ್ದು ಸದಾಶಿವರಾಯ. ಇದು ಗೆಜೆಟಿಯರ್‌ನಲ್ಲಿಯೂ ದಾಖಲಾಗಿದೆ. ಆದರೆ ಇದನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ಮನಃಸ್ಥಿತಿ ನಮ್ಮದಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಸಂಶೋಧಕ ಡಾ. ಕೆಳದಿ ವೆಂಕಟೇಶ ಜೋಯಿಸ್ ಮಾತನಾಡಿ, ಕೆಳದಿ ಅರಸರು ಸುಮಾರು 13 ಜಿಲ್ಲೆಗಳಲ್ಲಿ ಆಡಳಿತ ನಡೆಸಿದ್ದಾರೆ. ಕ್ರಿ.ಶ. 1500ರಿಂದ 1763ರವರೆಗೆ 17 ರಾಜರು ಕೆಳದಿ ಸಂಸ್ಥಾನದಲ್ಲಿ ಆಳ್ವಿಕೆ ನಡೆಸಿದ್ದಾರೆ. ಇದು 200 ವರ್ಷ ಆಡಳಿತ ನಡೆಸಿದ ಸಂಸ್ಥಾನ ಎಂದು ವಿವರಿಸಿದರು.

ಎರಡನೇ ಗೋಷ್ಠಿಯ ಅಧ್ಯಕ್ಷತೆ ವಹಿಸಿದ ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಆರ್. ಶೇಜೇಶ್ವರ್ ಮಾತನಾಡಿ, ಮಲೆನಾಡಿನ ಅರಸುಮನೆತನಗಳಲ್ಲಿ ವಿಶೇಷವಾದ ಮನೆತನ ಗೇರುಸೊಪ್ಪೆಯ ಸಾಳ್ವರದ್ದು. ಅನೇಕ ನದಿಗಳ ಸಂಗಮವಾದ ಗೇರುಸೊಪ್ಪೆ ಐತಿಹಾಸಿಕವಾಗಿ ಅತ್ಯಂತ ಮಹತ್ವದ ಪ್ರದೇಶ ಎಂದು ತಿಳಿಸಿದರು. ಹಿರಿಯ ಸಾಹಿತಿ ಡಾ. ನಾ. ಡಿಸೋಜಾ ಮಾತನಾಡಿ, ಗೇರುಸೊಪ್ಪ ಸಾಳ್ವ ರಾಜಮನೆತನದ ರಾಜಧಾನಿಯಾಗಿತ್ತು. 1908ರಲ್ಲಿ ಬ್ರಿಟಿಷರು ಸಾಳ್ವರ ಕುರಿತು ಬೆಳಕಿಗೆ ತಂದರು. ಸಾಳ್ವರು ಸುಮಾರು 250 ವರ್ಷಗಳ ಕಾಲ ವೈಭವದಿಂದ ಆಳ್ವಿಕೆ ನಡೆಸಿದ್ದರು. 16ನೇ ಶತಮಾನದಲ್ಲಿ ರಾಜ್ಯಭಾರ ನಡೆಸಿದ್ದ ಸಾಳ್ವರ ರಾಣಿ ಚೆನ್ನಭೈರಾದೇವಿ ಕಾಳುಮೆಣಸಿನ ರಾಣಿ ಎಂದೇ ಖ್ಯಾತಿ ಪಡೆದಿದ್ದಳು ಎಂದರು. ಬಿಳಗಿ ಅರಸರ ಕುರಿತಾಗಿ ಮಾತನಾಡಿದ ಸಂಶೋಧಕಿ ವಿನೋದಾ ಭಟ್ ಬೆಟ್ಟಳ್ಳಿ, ಬಿಳಗಿಯನ್ನು ವಿಜಯನಗರದ ಸಾಮಂತರಸರು ಆಳುತ್ತಿದ್ದರು. ಇಲ್ಲಿ ಜೈನರು, ವೀರಶೈವರು ಆಳಿದ್ದರಿಂದ ಜೈನಬಸದಿಗಳು, ದೇವಾಲಯಗಳು ನಿರ್ಮಾಣಗೊಂಡವು ಎಂದು ತಿಳಿಸಿದರು.

ಮೂರನೇ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ಇತಿಹಾಸ ಸಂಶೋಧಕ ಖಂಡೋಬರಾವ್ ಮಾತನಾಡಿ ಇತಿಹಾಸವನ್ನು ತಿಳಿಯಲು ಮೂಲಾಧಾರ ಶಾಸನಗಳು. ವಿಷ್ಣುವರ್ಧನನ ಪತ್ನಿ ಶಾಂತಲೆಗೂ ಮಲೆನಾಡಿಗೂ ಅವಿನಾಭಾವ ಸಂಬಂಧವಿತ್ತು ಎಂದು ಹೇಳಿದರು. ಇತಿಹಾಸ ಸಂಶೋಧಕ ಹಿರೇನಲ್ಲೂರು ಪಾಂಡುರಂಗ ಮಾತನಾಡಿ ಹೊಯ್ಸಳ ಸಾಮ್ರಾಜ್ಯದ ಉಗಮಸ್ಥಾನವೇ ಚಿಕ್ಕಮಗಳೂರು ಜಿಲ್ಲೆ. ಹೊಯ್ಸಳರ ಕಾಲದಲ್ಲಿ ದೇಗುಲ, ಬಸದಿ, ಕೆರೆ, ಕೃಷಿ ಅಭಿವೃದ್ಧಿಗೊಂಡಿತು. ಹರೇನಲ್ಲೂರು ಕೆರೆ, ಬಸವನಹಳ್ಳಿ ಕೆರೆ, ವಿಷ್ಣುಸಮುದ್ರ ತೂಬು ಮುಂತಾದವನ್ನು ಅವರು ನಿರ್ಮಿಸಿದರು ಎಂದು ಹೇಳಿದರು. ಹೊಂಬುಜ ಸಾಂತರಸರ ಕುರಿತು ಮಾತನಾಡಿದ ಹಿರಿಯ ವಿದ್ವಾಂಸ ಹಾದಿಗಲ್ಲು ಲಕ್ಷ್ಮೀನಾರಾಯಣ ಭಟ್ ಅವರು, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಸೇರಿದಂತೆ ದಕ್ಷಿಣ ಕನ್ನಡದ ಕೆಲ ಪ್ರದೇಶಗಳಲ್ಲಿ ಸಾಂತರಸರು ಆಳ್ವಿಕೆ ನಡೆಸಿದರು. ಸಾಂತರಸರ ಕುರಿತು 38 ಶಾಸನಗಳಲ್ಲಿ ಉಲ್ಲೇಖವಿದೆ. ಶಾಂತ ಸ್ವಭಾವದವರಾಗಿದ್ದರಿಂದ ಅವರನ್ನು ಸಾಂತರು ಎಂದು ಕರೆಯಲಾಗಿದೆ. ಇವರು ಶಿಲ್ಪಕಲೆ, ನಾಟಕ, ಯಕ್ಷಗಾನ, ನೃತ್ಯ, ಕೃಷಿಗೆ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟಿದ್ದರು ಎಂದು ತಿಳಿಸಿದರು.




ಅಪರಾಹ್ನ 'ಸುಂದರ ಮಲೆನಾಡಿನ ಧೀಮಂತ ಅರಸರು' ಕಾಫಿ ಟೇಬಲ್ ಪುಸ್ತಕದ ಲೋಕಾರ್ಪಣೆ ಹಾಗೂ ಮಲೆನಾಡಿನ ಅರಸುಮನೆತನಗಳ ಕುರಿತ ವಿಚಾರಗೋಷ್ಠಿಯ ಸಮಾರೋಪ ಸಮಾರಂಭ ನಡೆಯಿತು. ರಾ.ಸ್ವ.ಸಂಘದ ಜ್ಯೇಷ್ಠ ಪ್ರಚಾರಕ ಸು. ರಾಮಣ್ಣ ಮಾತನಾಡಿ, ಲಕ್ಷಾಂತರ ಜನರಿಗೆ ವಿಕ್ರಮ ವಾರಪತ್ರಿಕೆ ಗೊತ್ತಿಲ್ಲದಿರಬಹುದು. ಆದರೆ ವಿಕ್ರಮ ಗೊತ್ತಿರುವವರಿಗೆ ಅದು ಜೀವನದ ಅವಿಭಾಜ್ಯ ಅಂಗ. ವಿಕ್ರಮಕ್ಕೆ ಬದ್ಧರಾಗಿರುವ ಅಭಿಮಾನಿಗಳ ದೊಡ್ಡ ಬಳಗವೇ ಇದೆ. ಕೆಲವರಿಗೆ ಇದು ದಿನಚರಿಯ ಅಂಗ. ಹಿಂದೆ ಪತ್ರಿಕೆಯೆಂಬುದು ವ್ಯಾಪಾರ, ಉದ್ಯಮ ಆಗಿರಲಿಲ್ಲ. ಹಾಗಾಗಿ ಪತ್ರಿಕೋದ್ಯಮ ಎಂಬ ಪದಬಳಕೆ ಸರಿಯಲ್ಲ. ಮಹಾಭಾರತ ಬರೆದ ವ್ಯಾಸ, ರಾಮಾಯಣ ಬರೆದ ವಾಲ್ಮೀಕಿ ಅದನ್ನು ಉದ್ಯಮಕ್ಕಾಗಿ ರಚಿಸಲಿಲ್ಲ. ವಿಕ್ರಮ ಕೂಡ ತನ್ನ 75 ವರ್ಷಗಳನ್ನು ಹಾಗೆಯೇ ಕಳೆದಿದೆ ಎಂದು ವಿಕ್ರಮದ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದರು. ವಿಧಾನ ಪರಿಷತ್ ಮಾಜಿ ಸಭಾಪತಿ ಡಿ. ಎಚ್. ಶಂಕರಮೂರ್ತಿ ಕೃತಿ ಲೋಕಾರ್ಪಣೆಗೊಳಿಸಿ, ನಾವ್ಯಾರು ಎಂಬುದರ ಮರೆವು ನಮ್ಮನ್ನು ಕಾಡುತ್ತಿದೆ. ನಾವು ನಮ್ಮತನವನ್ನು ಮರೆತಿದ್ದೇವೆ. ಕೀಳರಿಮೆ ನಮ್ಮನ್ನು ಬಾಧಿಸುತ್ತಿದೆ. ಅದರಿಂದ ಹೊರಬರಬೇಕು ಎಂದು ಹೇಳಿದರು.

ಸಂಸದ ಬಿ. ವೈ. ವಿಜಯೇಂದ್ರ ಹೊಸದಿಗಂತ ಡಿಜಿಟಲ್‌ನ ವಿಡಿಯೋ ಟೀಸರ್ ಬಿಡುಗಡೆಗೊಳಿಸಿದರು. ರಾ.ಸ್ವ.ಸಂಘದ ದಕ್ಷಿಣ ಪ್ರಾಂತ ಸಹಕಾರ್ಯವಾಹ ಪಟ್ಟಾಭಿರಾಮ, ವಿಧಾನ ಪರಿಷತ್ ಸದಸ್ಯ ಡಿ. ಎಸ್. ಅರುಣ್, ಇತಿಹಾಸ ಸಂಶೋಧಕ ಡಾ. ಅಮರೇಶ ಯತಗಲ್ ಉಪಸ್ಥಿತರಿದ್ದರು.



ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.